ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಜನವರಿ 09, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 237 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
☎ 08192 254736 91642 99999




### ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲು ಯತ್ನ, ಪೊಲೀಸರ ಜೊತೆ ಮಾತಿನ ಚಕಮಕಿ

## ರೇಣುಕಾಚಾರ್ಯ ಸೇರಿ ಹಲವರ ಬಂಧನ-ಬಿಡುಗಡೆ

ದಾವಣಗೆರೆ, ಜ.8- ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ನೂರಾರು ಹಿಂದೂ ಕಾರ್ಯಕರ್ತರು ಸೋಮವಾರ ನಗರದ ಬಡಾವಣೆ ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಬಿಡುಗಡೆಗೊಳಿಸಿದ ಘಟನೆ ಸೋಮವಾರ ನಡೆದಿದೆ.

'ನಾವು ಕರಸೇವಕರು ನಮ್ಮನ್ನು ಬಂಧಿಸಿ' ಅಭಿಯಾನದ ಭಾಗವಾಗಿ ಪಿ.ಜೆ. ಬಡಾವಣೆಯ ಶ್ರೀರಾಮ ಮಂದಿರದಿಂದ ಬಡಾವಣೆ ಪೊಲೀಸ್ ಠಾಣೆವರೆಗೆ ಮೆರವಣಿಗೆ ನಡೆಸಿದ ಕಾರ್ಯಕರ್ತರು



ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರ ಜೊತೆ ಮಾತಿನ ಚಕಮಕಿ ನಡೆಯಿತು. ಪೊಲೀಸರು ಅವರನ್ನು ಬಂಧಿಸಿ, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಆವರಣಕ್ಕೆ ಕರೆದೊಯ್ದು ಕೆಲ ಸಮಯದ ನಂತರ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ರಾಜ್ಯ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ. ಹಿಂದೂಗಳಿಗೆ ರಕ್ಷಣೆ ಇಲ್ಲದಂತಾಗಿದೆ. 30 ವರ್ಷಗಳ (3ನೇ ಪುಟಕ್ಕೆ)

## ನೀತಿ ಸಂಹಿತೆಗೆ ಮುಂಚೆ ಮುಂಗಡ ಪತ್ರಕ್ಕೆ ಸಿಎಂ ಸಿದ್ದರಾಮಯ್ಯ ಸಿದ್ಧತೆ

**ಅಲ್ಪಸಂಖ್ಯಾತರ ಮತಗಳ ಜೊತೆಗೆ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದ ಮತಗಳನ್ನು ಗಟ್ಟಿ ಮಾಡಿಕೊಳ್ಳಲು ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಆಯಾ ಸಮಾಜಗಳಿಗೆ ಸೇರಿದ ಬೃಹತ್ ಸಮಾವೇಶಕ್ಕೆ ಮುಖ್ಯಮಂತ್ರಿ ಚಿಂತನೆ**

ಬೆಂಗಳೂರು, ಜ. 8 - ಲೋಕಸಭಾ ಚುನಾವಣೆಗೆ ರಾಜ್ಯದ ಮೂರು ರಾಜಕೀಯ ಪಕ್ಷಗಳು ಚುನಾವಣಾ ಸಿದ್ಧತೆ ಮಾಡಿಕೊಂಡಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ನೀತಿ ಸಂಹಿತೆ ಜಾರಿಗೊಳ್ಳುವ ಮುನ್ನವೇ 2024-25ರ ಮುಂಗಡ ಪತ್ರ ಮಂಡಿಸಲಿದ್ದಾರೆ.

ರಾಜ್ಯ ವಿಧಾನಮಂಡಲದ ಅಧಿವೇಶನವನ್ನು ಫೆಬ್ರವರಿ 12ರಂದು ಕರೆಯಲು ಸರ್ಕಾರ ತೀರ್ಮಾನಿಸಿದ್ದು, ಅಂದೇ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಮುಖ್ಯಮಂತ್ರಿ ಅವರು, ಫೆಬ್ರವರಿ 16ರಂದು ಬಜೆಟ್ ಮಂಡನೆ ಮಾಡಲಿದ್ದಾರೆ. ಮಾರ್ಚ್ ತಿಂಗಳ ಮಧ್ಯೆ ಭಾಗದಲ್ಲಿ ಕೇಂದ್ರ ಚುನಾವಣಾ ಆಯೋಗ ದೇಶದ 543 ಲೋಕಸಭಾ ಕ್ಷೇತ್ರಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ, ನೀತಿ ಸಂಹಿತೆ ಜಾರಿಗೆ ತರಲಿದೆ.

ಇದನ್ನು ಗಮನದಲ್ಲಿಟ್ಟುಕೊಂಡು ಮಾರ್ಚ್‌ನಲ್ಲಿ ಮಂಡಿಸಬೇಕಿದ್ದ ಮುಂಗಡ ಪತ್ರವನ್ನು ಫೆಬ್ರವರಿಯಲ್ಲೇ ಮಂಡಿಸಿ ಲೇಖಾನುದಾನ ಪಡೆಯಲಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚು ಸ್ಥಾನ ಗಳಿಸಲು ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ಈಗಿನಿಂದಲೇ ಚುನಾವಣಾ ತಯಾರಿ ನಡೆಸಿವೆ.

ಚುನಾವಣಾ ಸಿದ್ಧತೆಗೆ ಬಿಜೆಪಿ ಹಾಗೂ ಜೆಡಿಎಸ್ ಇಂದು ಮುಖಂಡರ ಸಭೆ ನಡೆಸಿದರೆ, ಕಾಂಗ್ರೆಸ್ ಜನವರಿ 10 ರಿಂದ ಮೂರು ದಿನಗಳ ಕಾಲ ಸರಣಿ ಸಭೆ ಹಮ್ಮಿಕೊಂಡಿದೆ.

28 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆಗಾಗಿ ಮೂರೂ ಪಕ್ಷಗಳು ಪ್ರತ್ಯೇಕ ಸಮೀಕ್ಷೆ ನಡೆಸಿ, ಸಮರ್ಥ ಅಭ್ಯರ್ಥಿಗಳ ಆಯ್ಕೆ ಮತ್ತು ಮತದಾರರನ್ನು ಓಲೈಸಿಕೊಳ್ಳಲು ಕಾರ್ಯಕ್ರಮ ರೂಪಿಸುತ್ತಿವೆ.

ಇದರ ಮಧ್ಯೆ ಪಕ್ಷ ಸಂಘಟನೆ ಮತ್ತು ಕಾರ್ಯಕರ್ತರ ವಿಶ್ವಾಸ ಪಡೆದುಕೊಳ್ಳಲು ಮುಖಂಡರುಗಳು ನಿರಂತರ ಸಭೆಗಳನ್ನು ನಡೆಸುತ್ತಿದ್ದಾರೆ.

ಜೆಡಿಎಸ್ ಜೊತೆಗೂಡಿ 28 ಕ್ಷೇತ್ರಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡಿರುವ ಬಿಜೆಪಿ ಇಂದು ಇಡೀ ದಿನ ರಾಜ್ಯ ಮುಖಂಡರುಗಳ ಸಭೆ ನಡೆಸಿತು.

ಅಭ್ಯರ್ಥಿಗಳ ಆಯ್ಕೆ, ಜೆಡಿಎಸ್ ಜೊತೆ ಹೊಂದಾಣಿಕೆ ಹಾಗೂ ಚುನಾವಣಾ ಪ್ರಚಾರಕ್ಕಾಗಿ ಸಭೆ ಮತ್ತು ರ‍್ಯಾಲಿಗಳನ್ನು ನಡೆಸುವ ಸಂಬಂಧ ಸಭೆ ಕೆಲವು ಮಹತ್ವದ ತೀರ್ಮಾನಗಳನ್ನು ಕೈಗೊಂಡಿದೆ.

ಸೀಮಿತ ಸ್ಥಾನಗಳಲ್ಲಿ ಕಣಕ್ಕಿಳಿಯಲು ನಿರ್ಧರಿಸಿರುವ ಜೆಡಿಎಸ್, ತಾವು ಸ್ಪರ್ಧಿಸಬಹುದಾದ ಸಂಭವನೀಯ ಕ್ಷೇತ್ರಗಳ ಕಾರ್ಯಕರ್ತರು ಮತ್ತು ಮುಖಂಡರ ಜೊತೆ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. (3ನೇ ಪುಟಕ್ಕೆ)

## ರಾಜ್ಯದಲ್ಲಿ ಮಲ ಹೊರುವ ಪದ್ಧತಿ ಒಂದು ಪ್ರಕರಣದಲ್ಲೂ ಶಿಕ್ಷೆಯಿಲ್ಲ !

**ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತರಾಟೆ**

ಬೆಂಗಳೂರು, ಜ. 8 – ರಾಜ್ಯದಲ್ಲಿ ಮಲ ಹೊರುವ ಪ್ರಕರಣಗಳ ಪೈಕಿ ಒಂದರಲ್ಲೂ ಶಿಕ್ಷೆಯಾಗಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದ್ದು, ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ಮಲ ಹೊರುವ ಪದ್ಧತಿಯಲ್ಲಿ ತೊಡಗಿಸಿದವರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸುವ ಅವಕಾಶವೂ ಇದೆ. ಆದರೆ, ಆ ಕಾಯ್ದೆಯನ್ನೂ ಬಳಸಿಕೊಳ್ಳುತ್ತಿಲ್ಲ ಎಂದು ನ್ಯಾಯಾಲಯ ಆಕ್ಷೇಪಿಸಿದೆ.

ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕಾವೆಂಜಿಂಗ್ ಕುರಿತು ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸುವಾಗ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನು ಒಳಗೊಂಡ ಪೀಠ ಈ ಟಿಪ್ಪಣಿ ಮಾಡಲಾಗಿದೆ.

ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತಿಕ್ರಿಯೆ ದಾಖಲಿಸಬೇಕು ಎಂದು ಹೇಳಿರುವ ಹೈಕೋರ್ಟ್, ವಿಚಾರಣೆಯನ್ನು ಜನವರಿ 30ಕ್ಕೆ ಮುಂದೂಡಿದೆ. ಈ ಪ್ರಕರಣದಲ್ಲಿ ಅಮಿಕಸ್ ಕ್ಯೂರಿ ಆಗಿದ್ದ ವಕೀಲ ಶ್ರೀಧರ ಪ್ರಭು ಅವರು ವಾದ ಮಂಡಿಸಿ, ಇಂತಹ ಪ್ರಕರಣಗಳಲ್ಲಿ ಜಾತಿ ನಿಂದನೆ ಕಾಯ್ದೆ ಬಳಸಬೇಕು ಎಂದು (3ನೇ ಪುಟಕ್ಕೆ)

## ರಾಜಸ್ಥಾನ ಚುನಾವಣೆ : ಬಿಜೆಪಿ ಸಚಿವಗೆ ಸೋಲು

ಜೈಪುರ, ಜ. 8-ರಾಜಸ್ಥಾನ ಸಚಿವ ಸುರೇಂದ್ರ ಪಾಲ್ ಸಿಂಗ್ ಅವರು ಕರನ್‌ಪುರ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಎದುರಾಳಿ ವಿರುದ್ಧ 11,283 ಮತಗಳ ಕಹಿ ಸೋಲು ಕಂಡಿದ್ದಾರೆ. ಇತ್ತೀಚೆಗಷ್ಟೇ ಅಧಿಕಾರಕ್ಕೆ ಬಂದಿದ್ದ ಬಿಜೆಪಿಗೆ ಮುಖಭಂಗ ಎದುರಾಗಿದೆ.

ಡಿಸೆಂಬರ್ 30ರಂದು ಸಿಂಗ್ ಅವರು ಭಜನ್‌ಲಾಲ್ ಶರ್ಮ ಸಂಪುಟಕ್ಕೆ ಸೇರ್ಪಡೆಯಾಗಿದ್ದರು. ಜನವರಿ 5ರಂದು ಕರನ್‌ಪುರ್ ಕ್ಷೇತ್ರಕ್ಕೆ ಚುನಾವಣೆ ನಡೆದಿತ್ತು. ನಿಯಮಗಳ ಅನ್ವಯ ಸಚಿವರಾದವರು ನೇಮಕಗೊಂಡ ಆರು ತಿಂಗಳಲ್ಲಿ ಶಾಸಕರಾಗಬೇಕಿದೆ. (3ನೇ ಪುಟಕ್ಕೆ)

## ವೈದ್ಯರ ಬರಹ 'ಸ್ಪಷ್ಟವಿರಲಿ' ಎಂದು ಹೈಕೋರ್ಟ್ ಆದೇಶ

### ಓರೆಕೋರೆಯ ಬರಹದಿಂದ ಪ್ರಕರಣ ಇತ್ಯರ್ಥಕ್ಕೆ ಅಡ್ಡಿ

ಕಟಕ್, ಜ. 8 – ವೈದ್ಯರು ಔಷಧಿಯ ಸಲಹೆ ಹಾಗೂ ವೈದ್ಯಕೀಯ ವರದಿಗಳನ್ನು ಸ್ಪಷ್ಟವಾಗಿ ಕಾಣುವಂತೆ ಇಲ್ಲವೇ ಟೈಪ್ ಮಾಡಿ ಕಳಿಸುವಂತೆ ಸುತ್ತೋಲೆ ಹೊರಡಿಸಬೇಕು ಎಂದು ಒರಿಸ್ಸಾ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ವರದಿಗಳು ಸ್ಪಷ್ಟವಾಗಿದ್ದರೆ ನ್ಯಾಯಿಕ ವ್ಯವಸ್ಥೆ ಅನಗತ್ಯವಾಗಿ ಬಳಲುವುದು ತಪ್ಪುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕಳೆದ ವಾರ ನ್ಯಾಯಮೂರ್ತಿ ಎಸ್.ಕೆ. ಪಾಣಿಗ್ರಹಿ ಅವರು ಹಾವು ಕಡಿತ ಪ್ರಕರಣವೊಂದರ ವಿಚಾರಣೆ ನಡೆಸುತ್ತಿದ್ದರು. ಮರಣೋತ್ತರ ಪರೀಕ್ಷಾ ವರದಿ ಓದಲು ಸಾಧ್ಯವಾಗದಂತಿದ್ದ ಕಾರಣ ಇತ್ಯರ್ಥಕ್ಕೆ ಬರಲು ಸಾಧ್ಯವಾಗಲಿಲ್ಲ. (3ನೇ ಪುಟಕ್ಕೆ)

## ಕಾಂಗ್ರೆಸ್ ಶಾಸಕ ನಂಜೇಗೌಡ ತಾಣಗಳ ಮೇಲೆ ಇ.ಡಿ. ದಾಳಿ

ಬೆಂಗಳೂರು, ಜ. 8 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಕೆ.ವೈ. ನಂಜೇಗೌಡ ಹಾಗೂ ಅವರಿಗೆ ಸಂಬಂಧಿಸಿದ ತಾಣಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ಕೋಲಾರ ಜಿಲ್ಲೆಯ ಮಾಲೂರು ಶಾಸಕರಾಗಿರುವ ನಂಜೇಗೌಡ ಅವರ ನಿವಾಸ ಹಾಗೂ ಕೋಲಾರದ ಕೆಲ ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಕೋಲಾರ – ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ ನಂಜೇಗೌಡ ಅಧ್ಯಕ್ಷರಾಗಿದ್ದರು. ಈ ಒಕ್ಕೂಟದಲ್ಲಿ ಅವ್ಯವಹಾರಗಳಾಗಿವೆ ಎಂದು (3ನೇ ಪುಟಕ್ಕೆ)

## ಬಸವಣ್ಣ ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ಆಗ್ರಹ



**ಲಿಂಗಾಯತ ಮಠಾಧೀಶರಿಂದ ಮುಖ್ಯಮಂತ್ರಿಗೆ ಬೇಡಿಕೆ ಮಂಡನೆ**

ಬೆಂಗಳೂರು, ಜ.8- ಬಸವಣ್ಣ ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ ಲಿಂಗಾಯತ ಮಠಾಧೀಶರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷರಾಗಿರುವ ಭಾಲ್ಕಿ ಹಿರೇಮಠ ಸಂಸ್ಥಾನದ ಶ್ರೀ ಬಸವಲಿಂಗ ಪಟ್ಟದೇವರು ಸ್ವಾಮೀಜಿ, ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ದರಾಮ ಸ್ವಾಮೀಜಿ, ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿ ಮಾಡಿದ ಲಿಂಗಾಯತ ಹಾಗೂ ವಿವಿಧ ಸಮುದಾಯಗಳ 48 ಮಠಾಧೀಶರ ನಿಯೋಗ, ಈ ಬೇಡಿಕೆ ಮಂಡಿಸಿತು.

'ಬಸವಾದಿ ಶರಣರ ಆಶಯಗಳೆಲ್ಲವೂ ನಮ್ಮ ಸಂವಿಧಾನದಲ್ಲಿವೆ. ವಚನ ಮತ್ತು ಸಂವಿಧಾನದ ಧ್ಯೇಯೋದ್ದೇಶಗಳು ಒಂದೇ ಆಗಿವೆ. ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ (3ನೇ ಪುಟಕ್ಕೆ)

## 'ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು' ಹೇಳಿಕೆ

**ವಿಪಕ್ಷಗಳ ಖಂಡನೆ**

ಬೆಂಗಳೂರು, ಜ. 8 - ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂಬ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸಮಾವೇಶವೊಂದರಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಬೆಳಗಾವಿ ಜಿಲ್ಲೆ ನಿಪ್ಪಾಣಿ ತಾಲ್ಲೂಕಿನ ಕಾರದಗಾ ಗ್ರಾಮದಲ್ಲಿ ಕನ್ನಡ ಸಮಾವೇಶದಲ್ಲಿ ಮಾತನಾಡಿದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಬಹಳಷ್ಟು ಸಾಮ್ಯತೆಯಿಂದ ಇದ್ದವು. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು. ಬಹಳಷ್ಟು ಅನ್ಯೋನ್ಯತೆಯಿಂದ ಇದ್ದೆವು ಎಂದು ಹೇಳಿದ್ದಾರೆ. ಅವರ ಈ ವಿಡಿಯೋ ವೈರಲ್ ಆಗಿದೆ.

ನಂತರ ಸ್ಪಷ್ಟನೆ ನೀಡಿರುವ ಹೆಬ್ಬಾಳ್ಕರ್, ಕಾರದಗಾದಲ್ಲಿ ಕನ್ನಡಿಗರು - ಮರಾಠಿ ಭಾಷಿಕರೆಲ್ಲ ಸೇರಿ ಕನ್ನಡ ಸಮಾವೇಶ ನಡೆಸುತ್ತಿದ್ದರು. ಹಿಂದಿನಿಂದಲೂ ಕನ್ನಡಿಗರು - ಮರಾಠಿ ಭಾಷಿಕರು ಅನ್ಯೋನ್ಯತೆಯಿಂದ ಬಾಳುತ್ತಿದ್ದೇವೆ. ಈ ಅನ್ಯೋನ್ಯತೆ ಮುಂದು ವರೆಯಬೇಕು ಎನ್ನುವ ಆಶಯವನ್ನು ನಾನು ವ್ಯಕ್ತಪಡಿಸಿದ್ದೇನೆ ಎಂದಿದ್ದಾರೆ.

ಹೆಬ್ಬಾಳ್ಕರ್ ಹೇಳಿಕೆ ಸಮರ್ಥಿಸಿಕೊಂಡಿರುವ ಇನ್ನೋರ್ವ ಸಚಿವ ಎಂ.ಬಿ. ಪಾಟೀಲ್, ಕರ್ನಾಟಕದ ಏಕೀಕರಣಕ್ಕೆ ಮುಂಚೆ ಬೇರೆ ಬೇರೆ ಪ್ರಾಂತ್ಯಗಳಲ್ಲಿತ್ತು. ಏಕೀಕರಣದ ನಂತರ ಕರ್ನಾಟಕ ರೂಪುಗೊಂಡಿದೆ. ಇದು ಐತಿಹಾಸಿಕ ಸತ್ಯ. ಇದ್ದದ್ದು ಹೇಳಿದರೆ ತಪ್ಪಲ್ಲ ಎಂದಿದ್ದಾರೆ.

ಭಾಷಣದ ಸಂದರ್ಭದಲ್ಲಿ ಮಾತಿನ ಭರದಲ್ಲಿ ಕೆಲವು ಮಾತುಗಳನ್ನು ಆಡಿರುತ್ತೇವೆ. ಅವುಗಳು ಮುಖ್ಯ ವಿಷಯಗಳಾಗಿರುವುದಿಲ್ಲ. ಇದಕ್ಕೆ ಪ್ರಾಮುಖ್ಯತೆ ನೀಡಬಾರದು ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಇದು ರಾಜಕೀಯ ಗಿಮಿಕ್ ಅಲ್ಲದೇ ಬೇರೇನೂ ಅಲ್ಲ. ಕನ್ನಡತಿ ಎಂದು ಹೇಳಿಕೊಳ್ಳುವ ಹೆಬ್ಬಾಳ್ಕರ್ ಅವರು ಚುನಾವಣಾ ಸಮಯದಲ್ಲಿ ಸೌಹಾರ್ದತೆಗೆ ಧಕ್ಕೆ ತರುತ್ತಿದ್ದಾರೆ. ಕನ್ನಡದ ಬಗ್ಗೆ ದೊಡ್ಡ (3ನೇ ಪುಟಕ್ಕೆ)

### ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರ ಪ್ರಕರಣ

## ದೋಷಿಗಳ ಬಿಡುಗಡೆಗೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ, ಜ. 8 – ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದ 11 ಜನರನ್ನು ಅವಧಿ ಪೂರ್ವ ಬಿಡುಗಡೆ ಮಾಡಿದ್ದನ್ನು ರದ್ದುಗೊಳಿಸಿರುವ ಸುಪ್ರೀಂ ಕೋರ್ಟ್, ಇವರನ್ನು ಬಿಡುಗಡೆ ಮಾಡುವ ಅರ್ಜಿಗಳ ಪರಿಶೀಲನೆಗೆ ಗುಜರಾತ್ ಸರ್ಕಾರಕ್ಕೆ ಯಾವುದೇ ಅಧಿಕಾರ ಇರಲಿಲ್ಲ ಎಂದು ಹೇಳಿದೆ.



2002ರಲ್ಲಿ ಬಿಲ್ಕಿಸ್ ಬಾನೋ ಮೇಲೆ ಅತ್ಯಾಚಾರ ಎಸಗಿ, ಅವರ ಕುಟುಂಬದ ಏಳು ಜನರನ್ನು ಹತ್ಯೆಗೈದ ಪ್ರಕರಣದಲ್ಲಿ ಶಿಕ್ಷೆ ವಿಧಿಸಲಾಗಿತ್ತು. ಈ ಪ್ರಕರಣದ ವಿಚಾರಣೆ ಮಹಾರಾಷ್ಟ್ರದಲ್ಲಿ ನಡೆದು ಅಲ್ಲಿ ಶಿಕ್ಷೆಯಾಗಿತ್ತು.

ಮಹಾರಾಷ್ಟ್ರದಲ್ಲಿ ಶಿಕ್ಷೆಯಾಗಿರುವ ಕಾರಣ, ಅವಧಿ ಪೂರ್ವ ಬಿಡುಗಡೆ ಮಾಡುವ ವಿಷಯ ಆ ರಾಜ್ಯಕ್ಕೆ ಸಂಬಂಧಿಸಿದ್ದು. ಗುಜರಾತ್ ಈ ವಿಷಯ ಪರಿಗಣಿಸುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಗುಜರಾತ್ ಸರ್ಕಾರ ತನ್ನ ಅಧಿಕಾರ ದುರ್ಬಳಕೆ ಮಾಡಿ ಕೊಂಡಿದೆ. ದೋಷಿಗಳಿಗೆ ಅನುಕೂಲವಾಗುವ ರೀತಿ ನಡೆದುಕೊಂಡಿದೆ ಎಂದಿರುವ ಸುಪ್ರೀಂ ಕೋರ್ಟ್, ಈ ಪ್ರಕರಣದ 11 ದೋಷಿಗಳಿಗೆ ಅವಧಿಗೆ ಪೂರ್ವ ಬಿಡುಗಡೆ ಮಾಡುವ ಆದೇಶವನ್ನು ರದ್ದುಗೊಳಿಸಿದೆ. ಗುಜರಾತ್ ಸರ್ಕಾರದ ಕ್ರಮ ಮಹಾ ರಾಷ್ಟ್ರದ ಅಧಿಕಾರವನ್ನು ಮೀರಿದಂತೆ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.


ಗುಜರಾತ್‌ನಲ್ಲಿ ಸಾಕ್ಷಿಗಳನ್ನು ತಿರುಚುವ ಹಾಗೂ ಸಾಕ್ಷಿಗಳಿಗೆ ಅಪಾಯವಾಗುವ ಕಳವಳ ಇದೆ ಎಂದು ಬಿಲ್ಕಿಸ್ ಬಾನೋ ಕಳವಳ ವ್ಯಕ್ತಪಡಿಸಿದ್ದರು. ನಂತರ ಪ್ರಕರಣವನ್ನು ಮಹಾರಾಷ್ಟ್ರದ ಮುಂಬೈಗೆ ವರ್ಗಾಯಿಸಲಾಗಿತ್ತು. ಗುಜರಾತ್ ಸರ್ಕಾರದ ಆದೇಶಗಳನ್ನು ವಿವೇಚನೆ ಬಳಸಿ ಹೊರಡಿಸಿಲ್ಲ ಎಂದೂ ಹೇಳಿರುವ ಸುಪ್ರೀಂ ಕೋರ್ಟ್, ದೋಷಿಗಳು ಜೈಲು ಅಧಿಕಾರಿಗಳ ಎದುರು ಶರಣಾಗಬೇಕು ಎಂದು ಹೇಳಿದೆ.

ಬಾಕಾಭಾಯಿ ವೊಹಾನಿಯ, ಬಿಪಿನ್ ಚಂದ್ರ ಜೋಷಿ, ಕೇಸರಭಾಯ್ ವೊಹಾನಿಯ, ಗೋವಿಂದ್ ನೈ, ಜಸ್ವಂತ್ ನೈ, ಮಿತೇಶ್ (3ನೇ ಪುಟಕ್ಕೆ)

|| ಶ್ರೀ ಗಿರಿ ಮಲ್ಲೇಶ್ವರ ಪ್ರಸನ್ನ ||

19ನೇ ವರ್ಷದ ಚಿರಸ್ಮರಣೆ





ಶ್ರೀ ಸ.ಸ. ಕಲ್ಮೇಶ್ವರ ಮಹಾರಾಜರ ಶಿಷ್ಯರಾದ

ಸಂತ ಹೆಚ್.ಡಿ. ಹನುಮಂತಪ್ಪನವರು

(ಮಾಜಿ ಅಧ್ಯಕ್ಷರು,
ನಗರ ಕಾಂಗ್ರೆಸ್ ಸಮಿತಿ, ದಾವಣಗೆರೆ.)

ನೀವು ನಮ್ಮನ್ನಗಲಿ ದಿನಾಂಕ 09.01.2024ಕ್ಕೆ
19 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ಬಸಮ್ಮ ಹನುಮಂತಪ್ಪ
ಮಾಜಿ ಸದಸ್ಯರು, ದಾವಣಗೆರೆ ಮಹಾನಗರ ಪಾಲಿಕೆ ಮತ್ತು ನಗರಸಭೆ ಮಾಜಿ ಸದಸ್ಯರು
ಹಾಗೂ ಮಕ್ಕಳು ಮತ್ತು ಮೊಮ್ಮಕ್ಕಳು, ಬಂಧು-ಮಿತ್ರರು.

# ಸಿಎಂ ಸಿದ್ದರಾಮಯ್ಯ ಕೈ ಬಲಪಡಿಸಲು ಶೋಷಿತರ ಸಮಾವೇಶ



**ಹರಪನಹಳ್ಳಿ**

ಹರಪನಹಳ್ಳಿ, ಜ.8- ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೈ ಬಲಪಡಿಸಲು ನ್ಯಾಯಮೂರ್ತಿ ಕಾಂತರಾಜ್ ಆಯೋಗದ ವರದಿ ಯಥಾವತ್ ಅನುಷ್ಠಾನಕ್ಕೆ ಆಗ್ರಹಿಸಿ, ಚಿತ್ರದುರ್ಗ ನಗರದ ಹೊರವಲಯದಲ್ಲಿ ಇದೇ ದಿನಾಂಕ 28ರಂದು ಶೋಷಿತರ ಬೃಹತ್ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬಂದು, ಶೋಷಿತ ಸಮುದಾಯಗಳ ಐತಿಹಾಸಿಕ ಜಾಗೃತಿ ಸಮಾವೇಶವನ್ನು ಯಶಸ್ವಿಗೊಳಿಸುವಂತೆ ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇಂದು ನಡೆದ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಸಮಾವೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಿಂದುಳಿದ ಹಾಗೂ ತಳಸಮುದಾಯಗಳ ಸಚಿವರನ್ನು ಮತ್ತು ಪಕ್ಷಾತೀತವಾಗಿ ಎಲ್ಲಾ ಪಕ್ಷಗಳ ಅಹಿಂದ ವರ್ಗದ ನೇತಾರರನ್ನು ಸಮಾವೇಶಕ್ಕೆ ಆಮಂತ್ರಿಸಲು ಉದ್ದೇಶಿಸಲಾಗಿದೆ. ಶೋಷಿತರ ಈ ಬೃಹತ್ ಐತಿಹಾಸಿಕ ಸಮಾವೇಶದಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ 10 ಲಕ್ಷ ಜನ ಸಮಾಗಮ ಆಗುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಮುಖಂಡ ಕೋಡಿಹಳ್ಳಿ ಭೀಮಪ್ಪ ಮಾತನಾಡಿ, 2013ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು, ಕಾಂತರಾಜ್ ಆಯೋಗವನ್ನು ರಚಿಸುವ ಮೂಲಕ ಜಾತಿ ಗಣತಿಗೆ ನಾಂದಿ ಹಾಡಿದರು. ಈ ನಾಡಿನ ಜನರ ತೆರಿಗೆ ಹಣದ 158 ಕೋಟಿ ರೂ. ವೆಚ್ಚ ಮಾಡುವ ಜತೆಗೆ, ಗಣತಿ ಕಾರ್ಯಕ್ಕಾಗಿ ಶಿಕ್ಷಕರು ಹಾಗೂ ಅಧಿಕಾರಿಗಳನ್ನು ನಿಯೋಜಿಸುವ ಮೂಲಕ ಅಮೂಲ್ಯ ಮಾನವ ದಿನಗಳನ್ನು ವಿನಿಯೋಗಿಸಲಾಯಿತು.

ಗಣತಿ ಸಂದರ್ಭದಲ್ಲಿ ಬದಲಾದ ಸರ್ಕಾರದ ಮುಖ್ಯಮಂತ್ರಿ ಸೇರಿದಂತೆ, ವಿವಿಧ ಪಕ್ಷಗಳ ನಾಯಕರು, ಗಣತಿ ಕಾರ್ಯಕ್ಕೆ ತಮ್ಮ ಕೌಟುಂಬಿಕ ಹೇಳಿಕೆಯನ್ನು ದಾಖಲಿಸಿದ್ದಾರೆ. ಆದರೆ, ಈಗ ಜಾತಿಗಣತಿ ಅವೈಜ್ಞಾನಿಕವಾಗಿದೆ ಎಂದು ಹೇಳಿಕೆ ನೀಡುವುದು ಸಾಧುವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ ಮಾತನಾಡಿ, ಬಲಾಢ್ಯ ಸಮುದಾಯಗಳು ಮೀಸಲಾತಿ ಕೋರದಿದ್ದರೂ, ಅವರ ಮೇಲೆ ಮಮಕಾರ ತೋರುವ ಮೂಲಕ ಕೇಂದ್ರ ಸರ್ಕಾರ ಶೇ. 10ರಷ್ಟು ಮೀಸಲಾತಿ ಒದಗಿಸಿದೆ. ಜತೆಗೆ, ಅವೈಜ್ಞಾನಿಕವಾದ ನಿಯಮಗಳನ್ನು ಅಳವಡಿಸುವ ಮೂಲಕ ಮಹಿಳಾ ಮೀಸಲಾತಿಯನ್ನು ಘೋಷಿಸುವ ಮೂಲಕ ಮಹಿಳಾ ಸಂಕುಲಕ್ಕೆ ಅಪಚಾರ ಎಸಗಿದೆ. ಹೀಗಾಗಿ ಈಗ ಅಳವಡಿಸಿರುವ ನಿಯಮಗಳನ್ನು ಸಡಿಲಿಸುವ ಮೂಲಕ ತತಕ್ಷಣವೇ ಮಹಿಳಾ ಮೀಸಲಾತಿ ಅನುಷ್ಠಾನಗೊಳಿಸಬೇಕು. ಜತೆಗೆ, ಲೋಕಸಭೆ ಹಾಗೂ ವಿಧಾನಸಭೆ ಸದಸ್ಯತ್ವಕ್ಕೂ ಒಳಮೀಸಲಾತಿ ಕಲ್ಪಿಸಬೇಕು. ಅದರ ಜತೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸೇರಿದಂತೆ, ಇತರೆ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಶೋಷಿತ ಸಮುದಾಯಗಳಿಗೆ ಸಂಸತ್, ರಾಜ್ಯ ವಿಧಾನಮಂಡಲದ ಸದಸ್ಯತ್ವ ಮೀಸಲಾತಿ ಘೋಷಿಸಬೇಕು ಎಂದರು.

ಅಂಜುಮನ್ ಸಮಿತಿ ಮಾಜಿ ಅಧ್ಯಕ್ಷ ಸಿ. ಜಾಹೀದ್, ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಮುಖಂಡರಾದ ಹಲಗೇರಿ ಮಂಜುನಾಥ, ಶಂಕರನಹಳ್ಳಿ ಹನುಮಂತಪ್ಪ, ಡಿಶ್ ವೆಂಕಟೇಶ್, ಗುಡಿ ನಾಗರಾಜ್, ಶಿವಾಜಿನಾಯ್ಕ, ಡಿ. ಮೋತಿನಾಯ್ಕ. ಓ. ಮಹಾಂತೇಶ, ದೇವರತಿಮ್ಲಾಪುರ ಈಶ, ಕುರುಬ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಬಿ. ಗೋಣಿಬಸಪ್ಪ, ಕೊರಚ, ಕೊರಮ ಸಮಾಜದ ತಾಲ್ಲೂಕು ಅಧ್ಯಕ್ಷ ಅಶೋಕ, ಈಡಿಗ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಇ. ವೆಂಕಟೇಶ್, ಛಲವಾದಿ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಸಿ. ಪ್ರತಾಪ್, ಮುಖಂಡರಾದ ಕೆ.ಎಂ.ಮಂಜುನಾಥ್, ಮಾರೆಪ್ಪ, ಲಿಯಾಖತ್ ಅಲಿ, ಮೈದೂರು ರಾಮಣ್ಣ, ಹುಲಿಕಟ್ಟಿ ಚಂದ್ರಪ್ಪ, ಎಚ್. ವಸಂತಪ್ಪ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

# ಚನ್ನಗಿರಿ ತಾ.ನಲ್ಲಿ ಇಂದಿನಿಂದ 'ವಿನಯ ನಡಿಗೆ ಹಳ್ಳಿ ಕಡೆಗೆ' ಪಾದಯಾತ್ರೆ




ಚನ್ನಗಿರಿ, ಜ.8- ನಾಳೆ ದಿನಾಂಕ 9ನೇ ಮಂಗಳವಾರದಿಂದ ಚನ್ನಗಿರಿ ತಾಲ್ಲೂಕಿನ ಹಾಲೇಶಪುರದಿಂದ 'ವಿನಯ ನಡಿಗೆ, ಹಳ್ಳಿ ಕಡೆಗೆ' ಪಾದಯಾತ್ರೆಗೆ ಚಾಲನೆ ನೀಡಲಾಗುವುದು ಎಂದು ಕಾಂಗ್ರೆಸ್ ಮುಖಂಡ ವಿನಯ್ ಕುಮಾರ್ ಜಿ.ಬಿ. ತಿಳಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಸಂಘಟನೆ, ಜನರಲ್ಲಿ ಪಕ್ಷದ ಯೋಜನೆಗಳ ಕುರಿತು ಅರಿವು ಮೂಡಿಸುವುದು ಸೇರಿದಂತೆ, ಕಾರ್ಯಕ್ರಮಗಳ ಜೊತೆಯಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಐದು ದಿನಗಳ ಕಾಲ ಪ್ರತಿದಿನ 10 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಒಂದು ದಿನಕ್ಕೆ 25 ಕಿ.ಮೀ. ಪಾದಯಾತ್ರೆ ನಡೆಸಲಾಗುತ್ತದೆ ಎಂದರು.

ಮಾವಿನಕಟ್ಟೆ, ರಾಜಗೊಂಡನಹಳ್ಳಿ, ಮಲಹಾಳ್, ನೀತಿಗೆರೆ ತಾಂಡಾ, ಹಿರೇಕೋಗಲೂರು, ಕಾಶಿಪುರ ಕ್ಯಾಂಪ್ ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಮಾಡಲಾಗುತ್ತದೆ ಎಂದರು. ವಿನಯ ಮಾರ್ಗ ಟ್ರಸ್ಟ್‌ನಿಂದ ಡಿಸೆಂಬರ್ 18ರಿಂದ ಪ್ರಾರಂಭಗೊಂಡಿದ್ದು, ಜನವರಿ 14ರ ವರೆಗೆ 25 ದಿನಗಳ ಕಾಲ ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ 'ವಿನಯ ನಡಿಗೆ ಹಳ್ಳಿ ಕಡೆಗೆ' ಪಾದಯಾತ್ರೆ ನಡೆಸಲಾಗುತ್ತಿದೆ. ಈಗಾಗಲೇ ಜಗಳೂರು, ಹರಪನಹಳ್ಳಿ, ಹರಿಹರ, ಹೊನ್ನಾಳಿ, ನ್ಯಾಮತಿ ತಾಲ್ಲೂಕಿನ ಗ್ರಾಮಗಳಲ್ಲಿ ಪಾದಯಾತ್ರೆ ಮಾಡಲಾಗಿದೆ. ಪಾದಯಾತ್ರೆ ಮಾಡುವಂತಹ ಗ್ರಾಮಗಳಲ್ಲಿ ಪಕ್ಷದ ಮುಖಂಡರು, ರೈತರು, ಮಹಿಳೆಯರು, ಶಾಲಾ ಮಕ್ಕಳು, ಜೊತೆಗೂಡಿ ಗ್ರಾಮೀಣ ಭಾಗದ ಜನರ ಸಮಸ್ಯೆ ಆಲಿಸಲಾಗುತ್ತಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಿತ್ರದುರ್ಗ ಜಿ.ಪಂ. ಮಾಜಿ ಸದಸ್ಯ ಕೃಷ್ಣಮೂರ್ತಿ. ಅಣ್ಣಪ್ಪ ಹಾಲೇಶ್, ತಿಪ್ಪೇಶ್, ರುದ್ರೇಗೌಡ, ಶರತ್ ಕುಮಾರ್, ರಂಗಸ್ವಾಮಿ ಇದ್ದರು.

## ಹದಡಿ : ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ, ಮುಳ್ಳು ಗದ್ದಿಗೆ



ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ ಮತ್ತು ಮುಳ್ಳುಗದ್ದಿಗೆ ಜಾತ್ರೆ ಹಾಗೂ ಕೆಂಡದಾರ್ಚನೆ ಮಹೋತ್ಸವ ಮತ್ತು ಮಹಾಸ್ವಾಮಿಯ ಜಾತ್ರೋತ್ಸವವು ಇಂದು ನಡೆಯಲಿದೆ.

ಇಂದು ಬೆಳಿಗ್ಗೆ 9 ಗಂಟೆಗೆ ಕೆಂಡದ ಗದ್ದುಗೆಗೆ ಜ್ಯೋತಿ, ಮೆರವಣಿಗೆ, ಕೆಂಡದ ಗದ್ದಿಗೆಗೆ ಜ್ಯೋತಿ ಹಚ್ಚುವುದು, ಮಧ್ಯಾಹ್ನ 2 ಗಂಟೆಗೆ ಶ್ರೀ ಬೀರಲಿಂಗೇಶ್ವರ ದೇವರು, ಶ್ರೀ ಆಂಜನೇಯ ಸ್ವಾಮಿ ದೇವರು, ಶ್ರೀ ದಂಡಿ ದುರುಗಮ್ಮ ದೇವಿ, ಶ್ರೀ ಮಸಿಯಾಂಬಿಕಾ ದೇವಿ, ಶ್ರೀ ಹೊರಟ್ಟಿ ದುರುಗಮ್ಮ ದೇವಿ ದೇವರುಗಳು ಹೊಳೆ ಪೂಜೆ ಮಾಡಿ, ಹಲಗೆ, ಡೊಳ್ಳುಗಳ ಮೆರವಣಿಗೆ, ಪೂಜೆ ನಡೆದು, ಮಧ್ಯಾಹ್ನ 3 ಗಂಟೆಗೆ ಹೊರಟ್ಟಿ ದುಗ್ಗಮ್ಮ, ಮಸಿಯಮ್ಮ, ಆಂಜನೇಯಸ್ವಾಮಿ, ದಂಡಿ ದುರುಗಮ್ಮ ದೇವರುಗಳೊಂದಿಗೆ ಬೀರಲಿಂಗೇಶ್ವರರು ಮುಳ್ಳು ಗದ್ದಿಗೆ ಏರಿ ಮೆರವಣಿಗೆ ನಡೆಯುವುದು.

## ರಾಣೇಬೆನ್ನೂರು: ಇಂದು ಕೇಲಗಾರ ಅವರಿಗೆ ಸನ್ಮಾನ



ಗಾಯತ್ರಿ ಕೋ-ಆಪ್ ಸೊಸೈಟಿಯಿಂದ ಕಾಕಿ ಕಲ್ಯಾಣ ಮಂಟಪದಲ್ಲಿ ಸಂಜೆ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ನೇಮಕವಾಗಿರುವ ಡಾ. ಬಸವರಾಜ ಕೇಲಗಾರ ಅವರನ್ನು ಸನ್ಮಾನಿಸಲಾಗುವುದೆಂದು ನಗರಸಭೆ ಮಾಜಿ ಅಧ್ಯಕ್ಷ ಬಸವರಾಜ ಲಕ್ಮೇಶ್ವರ ತಿಳಿಸಿದ್ದಾರೆ.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮೌಲ್ಯಯುತ ಸಮಾಜ ನಿರ್ಮಾಣ : ಪುರಸಭೆ ಮುಖ್ಯಾಧಿಕಾರಿ ಸುರೇಶ್



**ಮಲೇಬೆನ್ನೂರು**

ಮಲೇಬೆನ್ನೂರು, ಜ. 8 - ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರು ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮೌಲ್ಯಯುತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದು ಮಲೇಬೆನ್ನೂರು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಶನಿವಾರ ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ವಲಯ ಮಟ್ಟದ ಸಾಧನಾ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಯೋಜನೆ ನಂಬಿಕೆಯ ಪ್ರತಿರೂಪವಾಗಿದ್ದು, ಜನರ ಏಳಿಗೆಗಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಮದ್ಯವರ್ಜನೆ ಶಿಬಿರವು ಸಮಾಜದಲ್ಲಿ ಬದಲಾವಣೆಗೆ ಶ್ರಮಿಸುತ್ತಿದೆ. ಇಂತಹ ಒಳ್ಳೆಯ ಯೋಜನೆಗಳ ಸದುಪಯೋಗ ಪಡೆದುಕೊಂಡು ಜನರು ಪ್ರಗತಿ ಸಾಧಿಸಬೇಕೆಂದು ಸುರೇಶ್ ಮನವಿ ಮಾಡಿದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ ಮಾತನಾಡಿ, ಧರ್ಮಸ್ಥಳ ಯೋಜನೆ ಹೆಣ್ಣುಮಕ್ಕಳಿಗೆ ಶಕ್ತಿ ಆಗಿದ್ದು, ಮಹಿಳೆಯರು ಸಾಕಷ್ಟು ಬದಲಾವಣೆ ಆಗುತ್ತಿದ್ದಾರೆ. ಸ್ವಚ್ಛತೆಯ ಬಗ್ಗೆ ನಿಮ್ಮ ಸುತ್ತ-ಮುತ್ತಲಿನ ಜನರಲ್ಲೂ ಅರಿವು ಮಾಡಿಸಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ ಎಂದರು.

ಯೋಜನೆಯ ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಜಿ. ಮಂಜುನಾಥ್ ಪಟೇಲ್, ಡಿ.ಸಿ.ಸಿ. ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ ಪುರಸಭೆ ಮಾಜಿ ಸದಸ್ಯ ಭಾನುವಳ್ಳಿ ಸುರೇಶ್ ಮಾತನಾಡಿದರು.

ಈ ವೇಳೆ ನಿವೃತ್ತ ಯೋಧ ರಾಜಾಭಕ್ಷಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ವೀರಭದ್ರೇಶ್ವರ ದೇವಸ್ಥಾನ ಕಮಿಟಿಯ ಬಿ.ಎನ್. ವೀರೇಶ್ ಅಧ್ಯಕ್ಷತೆ ವಹಿಸಿದ್ದರು.

ಪೊಲೀಸ್ ಮುಖ್ಯ ಪೇದೆ ವೆಂಕಟರಮಣ ಫಕೃದ್ದೀನ್ ಅಹ್ಮದ್, ಸಂಪನ್ಮೂಲ ವ್ಯಕ್ತಿಗಳಾದ ಮಲ್ಲಿಕಾರ್ಜುನ್ ಕಲಾಲ್ ಸದಾನಂದ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘದ ಸದಸ್ಯರಿಂದಾಗಿ ನಮ್ಮ ಯೋಜನೆ ಸಾಧನೆ ಮಾಡಿದೆ. ಮಲೇಬೆನ್ನೂರು ಯೋಜನಾಧಿಕಾರಿಗಳ ವ್ಯಾಪ್ತಿಯಲ್ಲಿ 9 ವಲಯಗಳಿದ್ದು ಎಲ್ಲಾ ವಲಯ ಗಳು ಉತ್ತಮ ಸಾಧನೆ ಮಾಡಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಲೇಬೆನ್ನೂರು ವಲಯ ಮೇಲ್ವಿಚಾರಕರಾದ ಶ್ರೀಮತಿ ಸಂಪತ್ ಲಕ್ಷ್ಮಿ ಸ್ವಾಗತಿಸಿದರು. ಅಕ್ಕನ ಬಳಗದ ಸದಸ್ಯರು ಪ್ರಾರ್ಥಿಸಿದರು. ಕೆ.ಬೇವಿನಹಳ್ಳಿ ವಲಯ ಮೇಲ್ವಿಚಾರಕ ಮಾರುತಿ ಗೌಡ ನಿರೂಪಿಸಿದರು. ಜಿಗಳಿ ವಲಯ ಮೇಲ್ವಿಚಾರಕ ಹರೀಶ್ ವಂದಿಸಿದರು.

## ಶಾಮನೂರು ಪೂಜಾರ್ ರೇವಣಸಿದ್ದಪ್ಪ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿಯಾದ

**ಪೂಜಾರ್ ರೇವಣಸಿದ್ದಪ್ಪ**

ಇವರು, ದಿನಾಂಕ 8.1.2024ರ ಸೋಮವಾರ ರಾತ್ರಿ11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 65 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.1.2024ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ನಗರದ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 9611480788**

॥ ಶ್ರೀ ಆಂಜನೇಯ ಪ್ರಸನ್ನ ॥ ॥ ಶ್ರೀ ಹುಲಿಗೆಮ್ಮದೇವಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಚಿಕ್ಕಬೂದಿಹಾಳ್ ಗ್ರಾಮದ ವಾಸಿ
**ದಿ. ಶ್ರೀ ಸೊಸೈಟಿ ಚಂದ್ರಪ್ಪನವರ ಮಕ್ಕಳಾದ**
**ಶ್ರೀ ಮೋಹನ್‌ಬಾಬು ಡಿ.ಸಿ. ಶ್ರೀಮತಿ ಚೇತನ ಮತ್ತು ಸಹೋದರರು**
**ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ 01.01.2024ನೇ ಸೋಮವಾರ ಬೆಳಿಗ್ಗೆ 7.30ಕ್ಕೆ ನಮ್ಮ ಪೂಜ್ಯ ಮಾತೃಶ್ರೀಯವರಾದ

**ಶ್ರೀಮತಿ ಕೆ. ರುದ್ರಮ್ಮನವರು**

ಇವರು ಕೈಲಾಸ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು** ದಿನಾಂಕ 09.01.2024ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ತಾಲ್ಲೂಕು ಚಿಕ್ಕಬೂದಿಹಾಳ್ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು : ಶ್ರೀಮತಿ ಶ್ರೀ ಮೋಹನ್ ಬಾಬು ಡಿ.ಸಿ. ಮತ್ತು ಮಕ್ಕಳು ಶ್ರೀಮತಿ ಶ್ರೀ ಶ್ರೀನಾಥ್ ಬಾಬು ಡಿ.ಸಿ. ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು. ಚಿಕ್ಕಬೂದಿಹಾಳ್ ಗ್ರಾಮ, ದಾವಣಗೆರೆ ತಾ. ಮತ್ತು ಜಿಲ್ಲೆ.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಎಸ್. ನಾಗರತ್ನಮ್ಮ ನಿಧನ




ದಾವಣಗೆರೆ ಸಿಟಿ ಎಂಸಿಸಿ 'ಬಿ' ಬ್ಲಾಕ್ 11ನೇ ಮೇನ್, 3ನೇ ಕ್ರಾಸ್ ವಾಸಿಯಾದ

**ಎಸ್. ನಾಗರತ್ನಮ್ಮ**

ಇವರು ದಿನಾಂಕ 8.1.2024ರ ಸೋಮವಾರ ರಾತ್ರಿ 10.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 79 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.1.2024ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 99007 50181, 63608 89429**

## ಎನ್. ವೀರಣ್ಣ ನಿಧನ



ದಾವಣಗೆರೆ ಬಸವರಾಜಪೇಟೆಯ 2ನೇ ಮೇನ್, 2ನೇ ಕ್ರಾಸ್ ವಾಸಿ ಎನ್. ವೀರಣ್ಣ (56) ಇವರು ದಿನಾಂಕ 8.01.2024ರ ಸೋಮವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.01.2024ರ ಮಂಗಳವಾರ ಸಂಜೆ 4 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ

## ನ್ಯಾಮತಿಯಲ್ಲಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಂದ ಅಹವಾಲು ಸ್ವೀಕಾರ

ದಾವಣಗೆರೆ, ಜ. 8 - ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್. ಕೌಲಾಪೂರೆ ಅವರು ನ್ಯಾಮತಿ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 10 ರ ಬುಧವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

ಸಾರ್ವಜನಿಕರು ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದೇ ಬಾಕಿ ಇಟ್ಟಿದ್ದಲ್ಲಿ ಅಂತಹ ದೂರುಗಳನ್ನು ಸಲ್ಲಿಸಬಹುದಾಗಿದೆ.

## ಕೆಟಿಜೆ ನಗರದಲ್ಲಿ ಇಂದು ಕಾರ್ತಿಕೋತ್ಸವ

ಕೆ.ಟಿ.ಜೆ. ನಗರ 10ನೇ ತಿರುವಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿದುರ್ಗಮ್ಮ ದೇವಿಯ ಕಾರ್ತಿಕೋತ್ಸವವನ್ನು ಇಂದು ಸಂಜೆ 7.30 ಕ್ಕೆ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ತಿಳಿಸಿದ್ದಾರೆ. ಸರ್ವ ಭಕ್ತಾದಿಗಳು ಕಾರ್ತಿಕೋತ್ಸವದಲ್ಲಿ ಭಾಗವಹಿಸುವಂತೆ ಅವರು ಕೋರಿದ್ದಾರೆ.

॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ಗ್ರಾಮದ ವಾಸಿ
**ಶ್ರೀ ಗೌಡ್ರ ಸಣ್ಣಶಿವಪ್ಪರ ಕೆ.ಎಸ್. ಬಸಪ್ಪ (ನಿ.ಶಿಕ್ಷಕರು) ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 02.01.2024ನೇ ಮಂಗಳವಾರ ಬೆಳಿಗ್ಗೆ 9.45ಕ್ಕೆ ನಮ್ಮ ನನ್ನ ಧರ್ಮಪತ್ನಿಯಾದ

**ಸಣ್ಣಶಿವಪ್ಪರ ಸುಶೀಲಮ್ಮ**

ಇವರು ಶಿವಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 10.01.2024ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು**
**ಶ್ರೀ ಗೌಡ್ರು ಸಣ್ಣಶಿವಪ್ಪರ ಕೆ.ಎಸ್. ಬಸ್ಸಪ್ಪ, (ನಿ.ಶಿಕ್ಷಕರು) ಮತ್ತು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು**
**ಸಣ್ಣ ಶಿವಪ್ಪರ ವಂಶಸ್ಥರು, ಹೆಚ್. ಕಲಪನಹಳ್ಳಿ ಗ್ರಾಮಸ್ಥರು ಹಾಗೂ ಬಂಧು ಮಿತ್ರರು. ಮೊ : 88672 50798**

ವಿ.ಸೂ. : ಆಹ್ವಾನ ಪತ್ರಿಕೆ ತಲುಪೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಶಾಮನೂರು ಕಮದೋಡು ಷಣ್ಮುಖಪ್ಪ ನಿಧನ



ದಾವಣಗೆರೆ ಆಂಜನೇಯ ಬಡಾವಣೆ, 16ನೇ ಕ್ರಾಸ್ ವಾಸಿ
ದಾವಣಗೆರೆ ಮಹಾನಗರ ಪಾಲಿಕೆ ನಿವೃತ್ತ ನೌಕರರಾದ

**ಶ್ರೀ ಕಮದೋಡು ಷಣ್ಮುಖಪ್ಪ (ಶಾಮನೂರು)**

ಇವರು, ದಿನಾಂಕ 08.1.2024ನೇ ಸೋಮವಾರ ಸಂಜೆ 6.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು, ಸಹೋದರಿ ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 10.1.2024ರ ಬುಧವಾರ ಬೆಳಿಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ನಗರದ ಆಂಜನೇಯ ಬಡಾವಣೆಯ 16ನೇ ಕ್ರಾಸ್‌ನ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಮೊ : 99160 64962, 96204 03478**

## ಯುವ ಜನರಿಗೆ ವಿವಿಧ ತರಬೇತಿಗೆ ಅರ್ಜಿ

ದಾವಣಗೆರೆ, ಜ. 8 - ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಯುವ ಜನರಿಗೆ ವಿವಿಧ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಜಿಮ್, ಫಿಟ್ನೆಸ್, ಬ್ಯೂಟೀಷಿಯನ್, ವೀಡಿಯೋಗ್ರಾಫಿ, ನಿರೂಪಣಾ ಮತ್ತು ವಾರ್ತಾ ವಾಚಕರ ತರಬೇತಿಗೆ ಅರ್ಜಿ ಸಲ್ಲಿಸಬಹುದು. ಆಸಕ್ತರು ಪರಿಶಿಷ್ಟ ಜಾತಿ ಯುವ ಜನರು ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿ ಅರ್ಜಿ ನಮೂನೆಯನ್ನು ಪಡೆದು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 16 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ದೂ.ಸಂ: 08192-237480 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಅಯೋಧ್ಯೆ ರಾಮ ಮಂದಿರ ಶೋಷಣೆಯ ತಾಣ

**ಆರ್.ಜೆ.ಡಿ. ಸಚಿವ ಚಂದ್ರಶೇಖರ್**

ರೋಹ್ತಾಸ್, ಜ. 8 – ಅಯೋಧ್ಯೆಯ ರಾಮ ಮಂದಿರ ಶೋಷಣೆಯ ತಾಣ ಎಂದು ಬಿಹಾರದ ಶಿಕ್ಷಣ ಸಚಿವ ಚಂದ್ರಶೇಖರ್ ಹೇಳಿದ್ದಾರೆ.

ರೋಹ್ತಾಸ್ ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಆರ್.ಜೆ.ಡಿ. ನಾಯಕ ಚಂದ್ರಶೇಖರ್, ರಾಮ ಮಂದಿರಕ್ಕೆ ಜಾಗ ನೀಡಿರುವುದು ಶೋಷಣೆಗೆ ಜಾಗ ನೀಡಿದಂತೆ. ಇದು ಒಂದು ಸಮುದಾಯದ ಕೆಲ ಸಂಚುಕೋರರ ಜೇಬು ತುಂಬಿಸುವ ಜಾಗ ಎಂದು ಹೇಳಿದ್ದಾರೆ.

ಢೋಂಗಿ ಹಿಂದುತ್ವವಾದಿಗಳು ಹಾಗೂ ಢೋಂಗಿ ರಾಷ್ಟ್ರವಾದಿಗಳ ಬಗ್ಗೆ ನಾವು ಎಚ್ಚರವಾಗಿರಬೇಕಿದೆ. ರಾಮ ದೇವರು ನಮ್ಮೆಲ್ಲರಲ್ಲೂ ಇದ್ದಾನೆ. ನಾವು ಎಲ್ಲಿಗೂ ಅಥವಾ ಯಾವುದೇ ದೇವಾಲಯಕ್ಕೆ ತೆರಳಿ ರಾಮ ದೇವರ ಹುಡುಕಬೇಕಿಲ್ಲ ಎಂದವರು ಹೇಳಿದ್ದಾರೆ.


ದೇವಾಲಯಗಳು ಮಾನಸಿಕ ಗುಲಾಮಗಿರಿಯ ಮಾರ್ಗ. ಶಾಲೆಗಳು ಬೆಳಕು ತೋರುವ ಮಾರ್ಗ ಎಂದವರು ಹೇಳಿದ್ದಾರೆ.

ಈ ಹೇಳಿಕೆಯನ್ನು ಟೀಕಿಸಿರುವ ಬಿಜೆಪಿ ರಾಜ್ಯ ನಾಯಕ ನಿಖಿಲ್ ಆನಂದ್, ಮುಸ್ಲಿಮ್ ಮತದಾರರನ್ನು ಓಲೈಸಲು ಆರ್.ಜೆ.ಡಿ. ನಾಯಕರು ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದಿದ್ದಾರೆ.

ಹಿಂದೂಗಳ ಅವಹೇಳನ ಹಾಗೂ ಮುಸ್ಲಿಮರ ಓಲೈಕೆಗೆ ಆರ್.ಜೆ.ಡಿ. ನಾಯಕರು ಯಾವ ಹಂತಕ್ಕೆ ಬೇಕಾದರೂ ಹೋಗುತ್ತಾರೆ. ಅಯೋಧ್ಯೆ ಹಾಗೂ ಮಥುರಾಗಳು ದೇಶದ ಸಾಂಸ್ಕೃತಿಕ ಪರಂಪರೆ ಹಾಗೂ ಧಾರ್ಮಿಕ ಆತ್ಮಗೌರವಗಳಿಗೆ ಸಂಬಂಧಿಸಿದ ವಿಷಯಗಳು ಎಂದವರು ಹೇಳಿದ್ದಾರೆ.

ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಹಾಗೂ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಇತ್ತೀಚೆಗೆ ತಿರುಪತಿಗೆ ಕುಟುಂಬ ಸಮೇತ ಹೋಗಿದ್ದರು. ಅಲ್ಲಿ ತಮ್ಮ ತಲೆಕೂದಲನ್ನು ದೇವರಿಗೆ ಅರ್ಪಿಸಿ ಬಂದಿದ್ದರು. ಅವರು ತಮ್ಮ ಮನೆಗಳಲ್ಲಿ ಯಾವ ಧಾರ್ಮಿಕ ಪದ್ಧತಿ ಅನುಸರಿಸುತ್ತಾರೆ ಎಂಬುದನ್ನು ಚಂದ್ರಶೇಖರ್ ಕೇಳಬೇಕು ಎಂದು ನಿಖಿಲ್ ಆನಂದ್ ಹೇಳಿದ್ದಾರೆ.

# ಅಧಿಕಾರವಿಲ್ಲದವರ ಚಿತ್ರಗಳು ಕತ್ತೆಯ ಕೊಂಬಿನಂತೆ ಮಾಯ



**ಮಾಜಿ ಸಿಎಂ ಚೌಹಾಣ್**

ಭೂಪಾಲ್, ಜ. 8 – ಉನ್ನತ ಹುದ್ದೆಯಲ್ಲಿ ಇಲ್ಲ ಎಂದರೆ, ಅಂಥವರ ಚಿತ್ರಗಳು ಬ್ಯಾನರ್‌ಗಳಿಂದ 'ಕತ್ತೆಯ ಕೊಂಬಿನ ರೀತಿ' ಮರೆಯಾಗುತ್ತವೆ ಎಂದು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಕಳೆದ ನವೆಂಬರ್‌ನಲ್ಲಿ ನಡೆದ ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಚೌಹಾಣ್ ನೇತೃತ್ವದಲ್ಲಿ ಬಿಜೆಪಿ ಭಾರೀ ಬಹುಮತ ಗಳಿಸಿತ್ತು. ಆದರೆ, ಚೌಹಾಣ್ ಸತತ ಐದನೇ ಬಾರಿ ಮುಖ್ಯಮಂತ್ರಿಯಾಗುವ ಅವಕಾಶದಿಂದ ವಂಚಿತರಾಗಿದ್ದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ನೀಲಬಾದ್ ಪ್ರದೇಶದಲ್ಲಿ ಇಂದು ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಅಧಿಕಾರ ಇರುವಾಗ ಹಾಗೂ ಇಲ್ಲದಿರುವಾಗ ಜನರು ವರ್ತಿಸುವ ರೀತಿಯಲ್ಲಿ ಬದಲಾವಣೆಯಾಗುತ್ತದೆ ಎಂದಿದ್ದಾರೆ.

ಮುಖ್ಯಮಂತ್ರಿ ಹುದ್ದೆಯಲ್ಲಿದ್ದರೆ ಜನರು ಬಂದು ನಿಮ್ಮ ಕೈಗಳು ಹಾಗೂ ಕಾಲುಗಳು ಕಮಲಗಳಂತೆ ಎಂದು ಬಣ್ಣಿಸುತ್ತಾರೆ. ಆದರೆ, ಈ ಹುದ್ದೆ ಇಲ್ಲ ಎಂದರೆ, ಪೋಸ್ಟರ್‌ಗಳಲ್ಲಿ ನನ್ನ ಚಿತ್ರಗಳು ಕತ್ತೆಯ ತಲೆ ಮೇಲಿರುವ ಕೊಂಬುಗಳಂತೆ ಕಾಣೆಯಾಗುತ್ತವೆ ಎಂದು ಚೌಹಾಣ್ ತಮಾಷೆಯಾಗಿ ಹೇಳಿದರು.

ಜೀವನದಲ್ಲಿ ಬೇರೆಯವರಿಗಾಗಿ ಬದುಕುವ ಗುರಿ ಇದ್ದಾಗ ಸಂತೋಷ ಸಿಗುತ್ತದೆ. ಈಗಲೂ ನನಗೆ ಸಮಯವಿಲ್ಲ. ನಾನು ನಿರಂತರ ಕೆಲಸದಲ್ಲಿ ತೊಡಗಿಕೊಂಡಿರುತ್ತೇನೆ. ರಾಜಕೀಯದ ಆಚೆಗೂ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಅದೃಷ್ಟ ಎಂದವರು ಹೇಳಿದರು.

# ಪ್ರಕರಣ : ದೋಷಿಗಳ ಬಿಡುಗಡೆಗೆ ಸುಪ್ರೀಂ ಕೋರ್ಟ್ ತಡೆ

**(1ನೇ ಪುಟದಿಂದ)** ಭಟ್, ಪ್ರದೀಪ್ ಮೊರ್ಧಿಯ, ರಾಧೇಶ್ಯಾಮ್ ಷಾ, ರಾಜುಭಾಯಿ ಸೋನಿ, ರಮೇಶ್ ಚಂದನ ಹಾಗೂ ಶೈಲೇಶ್ ಭಟ್ ಅವರು ಅವಧಿಗೆ ಮುಂಚೆ ಬಿಡುಗಡೆಯಾಗಿದ್ದರು.

ಇವರ ಬಿಡುಗಡೆ ಪ್ರಶ್ನಿಸಿ ಬಿಲ್ಕಿಸ್ ಬಾನೋ ಅಲ್ಲದೇ, ಸಿಪಿಐ (ಎಂ)ನ ಸುಭಾಷಿನಿ ಅಲಿ ಸೇರಿದಂತೆ ಹಲವರು ಅರ್ಜಿ ದಾಖಲಿಸಿದ್ದರು. ಗೋಧ್ರಾ ಹತ್ಯಾಕಾಂಡದ ನಂತರ ಗುಜರಾತ್‌ನಲ್ಲಿ ವ್ಯಾಪಕ ಹಿಂಸಾಚಾರ ಉಂಟಾಗಿತ್ತು. ಆಗ ಐದು ತಿಂಗಳ ಗರ್ಭಿಣಿಯಾಗಿದ್ದ ಬಿಲ್ಕಿಸ್ ಬಾನೋ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿತ್ತು. ಅವರ ಮೂರು ವರ್ಷದ ಮಗಳು ಸೇರಿದಂತೆ, ಏಳು ಜನರನ್ನು ಗಲಭೆಕೋರರು ಹತ್ಯೆಗೈದಿದ್ದರು. ಇವರಿಗೆ ಗುಜರಾತ್ ಸರ್ಕಾರ ಆಗಸ್ಟ್ 15, 2022ರಲ್ಲಿ ಅವಧಿ ಪೂರ್ವ ಬಿಡುಗಡೆ ಮಾಡಲು ಆದೇಶ ಹೊರಡಿಸಿತ್ತು.

# ಕೊರೊನಾ ನಂತರ ಮಾಲ್ಡೀವ್ಸ್ ಪ್ರವಾಸ : ಭಾರತೀಯರೇ ಹೆಚ್ಚು

ನವದೆಹಲಿ, ಜ. 8 – ಕೋವಿಡ್ ನಂತರ ಮಾಲ್ಡೀವ್ಸ್‌ಗೆ ಭೇಟಿ ನೀಡುತ್ತಿರುವ ಪ್ರವಾಸಿಗರಲ್ಲಿ ಭಾರತೀಯರೇ ಹೆಚ್ಚಾಗಿದ್ದಾರೆ. ಪ್ರತಿ ವರ್ಷ ಎರಡು ಲಕ್ಷ ಜನ ಈ ದ್ವೀಪ ದೇಶಕ್ಕೆ ಭೇಟಿ ನೀಡುತ್ತಿದ್ದಾರೆ.

ಮಾಲ್ಡೀವ್ಸ್ ಪ್ರವಾಸೋದ್ಯಮ ಸಚಿವಾಲಯದ ಮಾಹಿತಿ ಪ್ರಕಾರ, 2023ರಲ್ಲಿ 2.09 ಲಕ್ಷ ಭಾರತೀಯರು ಆ ದೇಶಕ್ಕೆ ಭೇಟಿ ನೀಡಿದ್ದಾರೆ. 2022ರಲ್ಲಿ ಭೇಟಿ ನೀಡಿದವರ ಸಂಖ್ಯೆ 2.4 ಲಕ್ಷವಾಗಿತ್ತು. 2021ರಲ್ಲಿ 2.11 ಲಕ್ಷ ಜನ ಭೇಟಿ ನೀಡಿದ್ದರು.

ಕೊರೊನಾ ಸಮಯದಲ್ಲೂ ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಅವಕಾಶ ನೀಡಿದ ಕೆಲವೇ ಪ್ರವಾಸಿ ದೇಶಗಳಲ್ಲೀ ಮಾಲ್ಡೀವ್ಸ್ ಒಂದಾಗಿತ್ತು. ಈ ಅವಧಿಯಲ್ಲಿ 63 ಸಾವಿರ ಭಾರತೀಯರು ಆ ದೇಶಕ್ಕೆ ಭೇಟಿ



ನೀಡಿದ್ದರು. 2018ರಲ್ಲಿ ಮಾಲ್ಡೀವ್ಸ್‌ಗೆ ಬರುವವರ ಪೈಕಿ ಭಾರತೀಯರು ಐದನೇ ಸ್ಥಾನದಲ್ಲಿದ್ದರು. ಆಗ 90,474 ಜನ ಭೇಟಿ ನೀಡಿದ್ದರು. ನಂತರದ ವರ್ಷಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಾ ಬಂದಿದೆ.

**ಪ್ರಧಾನಿ ಮೋದಿ ನಿಂದನೆ ನಂತರ ಭುಗಿಲೆದ್ದ ಬಹಿಷ್ಕಾರದ ಅಭಿಯಾನ**

ಆದರೆ, ಮಾಲ್ಡೀವ್ಸ್‌ನ ಮೂವರು ಸಚಿವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ನಿಂದನಾತ್ಮಕ ಮಾತುಗಳನ್ನು ಬಳಸಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ದೊಡ್ಡ ಸಂಖ್ಯೆಯಲ್ಲಿ ಭಾರತೀಯರು ಮಾಲ್ಡೀವ್ಸ್‌ಗೆ ಬುಕ್ ಮಾಡಿದ್ದ ಟಿಕೆಟ್‌ಗಳನ್ನು ರದ್ದುಗೊಳಿಸುತ್ತಿದ್ದಾರೆ. ಮಾಲ್ಡೀವ್ಸ್‌ಗೆ ಬಹಿಷ್ಕಾರ ಹಾಕಬೇಕೆಂಬ ಅಭಿಯಾನ ಜಾಲತಾಣಗಳಲ್ಲಿ ನಡೆದಿದೆ. ಭಾರತವನ್ನು ಬೆಂಬಲಿಸಿ ಮಾಲ್ಡೀವ್ಸ್‌ಗೆ ತೆರಳುವ ಎಲ್ಲಾ ವಿಮಾನಗಳ ಬುಕಿಂಗ್ ತಡೆದಿರುವುದಾಗಿ ಈಸ್‌ಮೈಟ್ರಿಪ್ ಸಂಸ್ಥೆ ತಿಳಿಸಿದೆ.

ವಿವಾದದ ನಂತರ ಮಾಲ್ಡೀವ್ಸ್ ಸರ್ಕಾರ ಮೋದಿ ನಿಂದಿಸಿದ್ದ ಮೂವರು ಉಪ ಸಚಿವರನ್ನು ಅಮಾನತ್ತುಗೊಳಿಸಿದೆ. ಪ್ರಧಾನಿ ಲಕ್ಷದ್ವೀಪಕ್ಕೆ ಭೇಟಿ ನೀಡಿದ ನಂತರ ಮಾಲ್ಡೀವ್ಸ್ ಸಚಿವರು ನಿಂದನಾತ್ಮಕ ಹೇಳಿಕೆ ನೀಡಿದ್ದರು. ಮಾಲ್ಡೀವ್ಸ್‌ಗೆ ಪರ್ಯಾಯವಾಗಿ ಲಕ್ಷದ್ವೀಪದ ಪ್ರವಾಸೋದ್ಯಮಕ್ಕೆ ಪ್ರಧಾನಿ ಉತ್ತೇಜನ ನೀಡುತ್ತಿದ್ದಾರೆ ಎಂದು ಸಚಿವರು ಭಾವಿಸಿದಂತಿತ್ತು.

ಹಿಂದೂ ಮಹಾಸಾಗರದ ಮಧ್ಯದಲ್ಲಿರುವ ಮಾಲ್ಡೀವ್ಸ್, 1,200 ಹವಳದ ದ್ವೀಪಗಳ ಸಮೂಹವಾಗಿದೆ. ಇದು 871 ಕಿ.ಮೀ. ಪ್ರದೇಶದಲ್ಲಿ ಹರಡಿದೆ.

# ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ಆಗ್ರಹ

**(1ನೇ ಪುಟದಿಂದ)** ಎಂದು ಘೋಷಿಸಲು ನನ್ನ ತಕರಾರಿಲ್ಲ. ಆದರೆ, ನಾನೊಬ್ಬನೇ ನಿರ್ಧಾರ ಕೈಗೊಳ್ಳಲಾಗದು. ಸಂಪುಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಸಿದ್ದರಾಮಯ್ಯ ನಿಯೋಗಕ್ಕೆ ಭರವಸೆ ನೀಡಿದರು.

ಆರಂಭದಲ್ಲಿ ಮುಖ್ಯ ಆಶಯ ನುಡಿಗಳನ್ನಾಡಿದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಬಸವಣ್ಣ ಮನುಕುಲದ ತಂದೆ, ತಾಯಿ, ಬಂಧು, ಬಳಗವಾಗಿದ್ದಾರೆ. ತಳಸಮುದಾಯದವರಲ್ಲಿ ಆತ್ಮವಿಶ್ವಾಸ ಮೂಡಿಸಿ ಲಿಂಗ ಸಮಾನತೆಯನ್ನು ಜಾರಿಗೆ ತಂದವರು.

ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಎಲ್ಲ ವರ್ಗದವರಿಗೆ ಪ್ರೀತಿಯ ಬೆಳಕು ಚೆಲ್ಲಿದವರು. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕನೆಂದು ಘೋಷಿಸುವ ಅವಕಾಶ ಸಿದ್ಧರಾಮಯ್ಯನವರಿಗೆ ದೊರೆ ತಿದೆ. ಹಾಗೆ ಘೋಷಿಸಿದರೆ ಅದೊಂದು ಐತಿಹಾಸಿಕ ದಾಖಲೆಯಾಗುತ್ತದೆ ಮತ್ತು ಬೇರಿಲ್ಲದೆ ಬೆಳೆಯುತ್ತಿರುವ ಯುವಶಕ್ತಿಗೆ ಚೈತನ್ಯ ತುಂಬುತ್ತದೆ. ಆದ್ದರಿಂದ ಮುಂಬರುವ ಬಸವ ಜಯಂತಿಯೊಳಗೆ ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕನೆಂದು ಘೋಷಿಸಬೇಕೆಂದು ಒತ್ತಾಯಪಡಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಭಾಲ್ಕಿಯ ಬಸವಲಿಂಗ ಪಟ್ಟದ ದೇವರು ಬಸವಣ್ಣನವರು, ಒಂದೇ ಸಮುದಾಯದ ನಾಯಕರಲ್ಲ. ಎಲ್ಲ ಸಮುದಾಯದವರ ನಾಯಕ ಎಂದರು.

ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಚನ್ನಬಸವಾನಂದ ಸ್ವಾಮೀಜಿ, ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಕಡಕಂಚಿ, ಅಕ್ಕ ಅನ್ನಪೂರ್ಣತಾಯಿ, ಮೈಸೂರು ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಡಾ.ಗಂಗಾಂಬಿಕೆ ಅಕ್ಕ, ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ ನಿಯೋಗದಲ್ಲಿದ್ದರು.

ಸಚಿವರಾದ ಎಂ.ಬಿ. ಪಾಟೀಲ, ಈಶ್ವರ ಖಂಡ್ರೆ, ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ, ಸಾಹಿತಿಗಳಾದ ಎಸ್.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಎಚ್.ಎಲ್.ಪುಷ್ಪಾ, ಲೇಖಕಿಯರಾದ ವಸುಂಧರಾ ಭೂಪತಿ, ಕೆ.ಷರೀಫಾ, ಎಲ್.ಎನ್. ಮುಕುಂದರಾಜು, ದಲಿತ ಸಂಘರ್ಷ ಸಮಿತಿಯ ಸಂಚಾಲಕ ಮಾವಳ್ಳಿ ಶಂಕರ್, ಜಾಗೃತ ಕರ್ನಾಟಕದ ಬಿ.ಸಿ.ಬಸವರಾಜು, ದೊಡ್ಡಿಪಾಳ್ಯ ನರಸಿಂಹಮೂರ್ತಿ ನಿಯೋಗದ ಜತೆಗಿದ್ದರು.

# ರೇಣುಕಾಚಾರ್ಯ ಸೇರಿ ಹಲವರ ಬಂಧನ

**(1ನೇ ಪುಟದಿಂದ)** ಹಿಂದಿನ ಪ್ರಕರಣವನ್ನು ಕೆದಕಿ ತೆಗೆದು, ರಾಮಮಂದಿರ ನಿರ್ಮಾಣಕ್ಕಾಗಿ ಹೋರಾಟ ನಡೆಸಿದ ಕರಸೇವಕರಿಗೆ ತೊಂದರೆ ಕೊಡುತ್ತಿದೆ ಎಂದರು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಲಕ್ಷಾಂತರ ಕರ ಸೇವಕರು ಅನೇಕ ಹೋರಾಟ ನಡೆಸಿದ್ದಾರೆ. ಅವರಲ್ಲಿ ನಾನೂ ಒಬ್ಬ. ರಾಜ್ಯ ಸರ್ಕಾರಕ್ಕೆ ತಾಕತ್ತಿದ್ದರೆ ಎಲ್ಲ ಕರ ಸೇವಕರನ್ನು ಬಂಧಿಸಿ ಎಂದು ಸವಾಲು ಹಾಕಿದರು. ನಾವು ಹಿಂದೂಗಳು ಶಾಂತಿಪ್ರಿಯರು. ಹೋರಾಟಕ್ಕಾಗಿ ಲಾಠಿ, ಗುಂಡು, ಪಿಸ್ತೂಲು ಹಿಡಿಯುವುದಿಲ್ಲ. ಬದಲಿಗೆ ಎದೆಕೊಟ್ಟು ನಿಂತು ಹೋರಾಟ ನಡೆಸುತ್ತೇವೆ. ಇದು ಹೋರಾಟದ ಆರಂಭ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಅವರು ಗೋದ್ರಾ ಹತ್ಯಾಕಾಂಡ ಮತ್ತೊಮ್ಮೆ ನಡೆಯಲಿದೆ ಎಂದು ಹೇಳುತ್ತಾ ಹಿಂದೂಗಳನ್ನು ಹೆದರಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಹೀಗೆ ಮಾತನಾಡಲು ಅವರಿಗೆ ನಾಚಿಕೆ ಆಗಬೇಕು. ಹಿಂದೂ ಕಾರ್ಯಕರ್ತರು ಫುಟ್‌ಬಾಲ್ ಇದ್ದಂತೆ. ನೀವು ಒದ್ದಷ್ಟು ಮತ್ತೆ ನಾವು ಪುಟಿದೇಳುತ್ತೇವೆ ಎಂದು ಬಿಜೆಪಿ ಮುಖಂಡ ಎನ್. ರಾಜಶೇಖರ್ ಹೇಳಿದರು. ಹರಿಹರ ಶಾಸಕ ಬಿ.ಪಿ. ಹರೀಶ್, ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್, ಡಾ.ಟಿ.ಜಿ. ರವಿಕುಮಾರ್, ಪಿ.ಸಿ. ಮಹಾಬಲೇಶ್ವರ ಭಟ್, ಲೋಕಿಕೆರೆ ನಾಗರಾಜ್, ಚಂದ್ರಶೇಖರ್ ಪೂಜಾರ್, ಕೆ.ಎಂ. ವೀರೇಶ್, ರಾಜು ವೀರಣ್ಣ, ಶಿವನಗೌಡ ಟಿ. ಪಾಟೀಲ್, ಟಿಂಕರ್ ಮಂಜಣ್ಣ, ಸೋಮಶೇಖರ್, ರಾಜೇಶ್ವರಿ ಕಲ್ಲಿಂಗಪ್ಪ, ಎಚ್.ಎಸ್. ಲಿಂಗರಾಜ್, ಎಂ.ಪಿ. ಕೃಷ್ಣಮೂರ್ತಿ ಪವಾರ್, ದೊಡ್ಡೇಶ್ ಹಾಗು ಇತರರು ಇದ್ದರು.

# 'ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು' ಹೇಳಿಕೆ

**(1ನೇ ಪುಟದಿಂದ)** ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣವೇ ಸಚಿವೆಯನ್ನು ಸಂಪುಟದಿಂದ ತೆಗೆದು ಹಾಕಬೇಕು ಎಂದಿದ್ದಾರೆ.

ಬಿಜೆಪಿಯ ಶಾಸಕ ಅಶ್ವತ್ಥ್ ನಾರಾಯಣ್ ಅವರು ಹೆಬ್ಬಾಳ್ಕರ್ ಹೇಳಿಕೆ ಖಂಡಿಸಿದ್ದು, ಇದು ರಾಜಕೀಯ ಪ್ರೇರಿತ ಹೇಳಿಕೆ. ಈ ಸಂದರ್ಭದಲ್ಲಿ ಹೇಳಿಕೆಯ ಅವಶ್ಯಕತೆ ಇರಲಿಲ್ಲ.

ಬೆಳಗಾವಿ ಈಗ ಕರ್ನಾಟಕಕ್ಕೆ ಸೇರಿದೆ. ರಾಜಕೀಯ ಪ್ರೇರಿತ ಹುನ್ನಾರ ಆಗಬಾರದು. ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಆಗಬೇಕು ಎಂದರು.

ಈ ಬಗ್ಗೆ ಮಾತನಾಡಿರುವ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ, ಬೆಳಗಾವಿ ವಿಷಯ ಮುಗಿದ ಅಧ್ಯಾಯ. ಸಚಿವೆ ಮಹಾರಾಷ್ಟ್ರದ ವ್ಯಾಮೋಹದಿಂದ ಹೊರ ಬಂದಂತಿಲ್ಲ. ಅವರ ಹೇಳಿಕೆ ಮತ್ತೆ ವಿವಾದಕ್ಕೆ ನೀರೆರೆದಂತೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಸಚಿವರಿಗೆ ಸರಿಯಾಗಿ ಬುದ್ಧಿ ಹೇಳಬೇಕು ಎಂದಿದ್ದಾರೆ.

# ಎಲೆಬೇತೂರಿನಲ್ಲಿ ಶಾಲಾ ವಾರ್ಷಿಕೋತ್ಸವ

ದಾವಣಗೆರೆ, ಜ. 8- ತಾಲ್ಲೂಕು ಎಲೆಬೇತೂರು ಗ್ರಾಮದ ಸೇಂಟ್ ಮದರ್ ತೆರೇಸಾ ಕಾನ್ವೆಂಟ್ ಶಾಲೆಯ ವಾರ್ಷಿಕೋತ್ಸವ ಶ್ರೀ ಆಂಜನೇಯ ದೇವಸ್ಥಾನದ ಆವರಣದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅಂಬಾಭವಾನಿ ಮಹಿಳಾ ವಿದ್ಯಾಸಂಸ್ಥೆ ಕಂಬತ್ತಳ್ಳಿ ಅಧ್ಯಕ್ಷರಾದ ಶ್ರೀಮತಿ ವಿ.ಎನ್. ದೇಸ್ಕರ್ ವಹಿಸಿದ್ದರು.

ಶಾಲಾ ಕಾರ್ಯದರ್ಶಿ ಮಂಜುಳಾ ಟಿ. ದೇಸ್ಕರ್ ಪ್ರಾಸ್ತಾವಿಕ ನುಡಿಯಲ್ಲಿ, ಗ್ರಾಮದಲ್ಲಿ 23 ವರ್ಷಗಳಿಂದ ಶಾಲೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದಕ್ಕೆಲ್ಲ ಗ್ರಾಮಸ್ಥರ ಸಹಕಾರ ಇದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಬಿ. ಕರಿಬಸಪ್ಪ ಉದ್ಘಾಟನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಷಡಕ್ಷರಪ್ಪ ಎಂ. ಬೇತೂರು, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕಲ್ಪನಳ್ಳಿ ಶ್ರೀಮತಿ ಶಾಂತಮ್ಮ ಬಸವನಗೌಡಪ್ಪ, ಮಾಜಿ ಕಾಡಾ ಸಮಿತಿ ಸದಸ್ಯರಾದ ಎಚ್. ಬಸವರಾಜಪ್ಪ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ವಿರುಪಾಕ್ಷಪ್ಪ, ಶಾಲೆಯ ಅಭಿವೃದ್ಧಿ ಕುರಿತು ಮಾತನಾಡಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಬಿ.ಶಿವಕುಮಾರ್, ಜಕ್ಕವರ ಚಂದ್ರಪ್ಪ, ಶ್ರೀಮತಿ ಜಯಮ್ಮ ಮಠದ ಬಸವರಾಜಯ್ಯ, ಶ್ರೀಮತಿ ಲತಾ ಮರಳಸಿದ್ದಾಚಾರ್, ಶ್ರೀಮತಿ ಶಾಂತಮ್ಮ ಮಂಜುನಾಥ್, ಆರ್.ಎ. ದೇಸ್ಕರ್ ಉಪಸ್ಥಿತರಿದ್ದರು.

ಶಾಲೆಯ ಕಾರ್ಯದರ್ಶಿ ಮಂಜುಳಾ, ಡಿ.ದೇಸ್ಕರ್, ಧನುಜ ವಿ. ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.



# ವೈದ್ಯರ ಬರಹ 'ಸ್ಪಷ್ಟವಿರಲಿ' ಎಂದು ಆದೇಶ

**(1ನೇ ಪುಟದಿಂದ)** ನಂತರ ವರದಿ ಬರೆದ ವೈದ್ಯರು ಆನ್‌ಲೈನ್ ಮೂಲಕ ಹಾಜರಾಗುವಂತೆ ತಿಳಿಸಲಾಯಿತು. ಆನ್‌ಲೈನ್‌ನಲ್ಲಿ ವೈದ್ಯರು ತಮ್ಮ ವರದಿ ಓದಿ ಅಭಿಪ್ರಾಯ ತಿಳಿಸಿದರು. ಆಗ ಪ್ರಕರಣ ಇತ್ಯರ್ಥಪಡಿಸಲು ಸಾಧ್ಯವಾಯಿತು.

ಸಾಕಷ್ಟು ಪ್ರಕರಣಗಳಲ್ಲಿ ವೈದ್ಯರ ಮರಣೋತ್ತರ ಪರೀಕ್ಷಾ ವರದಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ವೈದ್ಯಕೀಯ ಕಾನೂನು ಪ್ರಕರಣಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ನ್ಯಾಯಮೂರ್ತಿ ಪಾಣಿಗ್ರಹಿ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಓರೆಕೋರೆಯಾಗಿರುವ ಈ ಬರಹಗಳನ್ನು ಜನ ಸಾಮಾನ್ಯರಾಗಲೀ, ನ್ಯಾಯಿಕ ಅಧಿಕಾರಿಗಳಾಗಲೀ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ರೀತಿ ಬರೆಯುವುದು ವೈದ್ಯರಿಗೆ ಪ್ರವೃತ್ತಿಯಂತಾಗಿದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಇನ್ನು ಮುಂದೆ ಮರಣೋತ್ತರ ವರದಿಗಳು ಹಾಗೂ ಔಷಧದ ಸಲಹೆಗಳನ್ನು 'ಕ್ಯಾಪಿಟಲ್' ಅಕ್ಷರಗಳಲ್ಲಿ ಇಲ್ಲವೇ ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ಬರೆಯಬೇಕು ಎಂದು ಹೈಕೋರ್ಟ್ ಆದೇಶದಲ್ಲಿ ತಿಳಿಸಲಾಗಿದೆ.

# ಪದ್ಧತಿ : ಒಂದು ಪ್ರಕರಣದಲ್ಲೂ ಶಿಕ್ಷೆಯಿಲ್ಲ !

**(1ನೇ ಪುಟದಿಂದ)** ಹೇಳಿದರು.

2013ರಲ್ಲೇ ಮ್ಯಾನ್ಯುಯಲ್ ಸ್ಕಾವೆಂಜರ್ಸ್ ಮತ್ತು ಪುನರ್ವಸತಿ ಕಾಯ್ದೆ ಜಾರಿಗೆ ತರಲಾಗಿದೆ. ಆದರೂ, ಆರೋಪಿಗಳು ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಹೈಕೋರ್ಟ್ ಹೇಳಿದೆ. ಈ ಪ್ರಕರಣಗಳನ್ನು ಪ್ರಾಸಿಕ್ಯೂಷನ್ ಹಾಗೂ ಸರ್ಕಾರಿ ವಕೀಲರು ಗಂಭೀರವಾಗಿ ನಿರ್ವಹಿಸುತ್ತಿಲ್ಲ. ಈ ಕಾರಣದಿಂದಲೇ ಆರೋಪಿಗಳು ನುಣುಚಿಕೊಳ್ಳುತ್ತಿದ್ದಾರೆ. ಈ ವಕೀಲರು ಹಾಗೂ ನಿಮ್ಮ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ವಿರುದ್ಧ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಎಂದೂ ನ್ಯಾಯಾಲಯ ಪ್ರಶ್ನಿಸಿದೆ.

ಸಣ್ಣ ಪುಟ್ಟ ಪ್ರಕರಣಗಳಲ್ಲೂ ಶಿಕ್ಷೆಯಾಗುತ್ತದೆ. ಆದರೆ, ಮ್ಯಾನ್ಯುಯಲ್ ಸ್ಕಾವೆಂಜರ್ಸ್ ಗಂಭೀರ ಪ್ರಕರಣಗಳ ಪೈಕಿ ಒಂದು ಪ್ರಕರಣದಲ್ಲೂ ಶಿಕ್ಷೆಯಾಗಿಲ್ಲ. ಇದು ಹೇಗೆ ಸಾಧ್ಯ? ಇದು ನ್ಯಾಯದ ಅಣಕ ಎಂದು ಹೈಕೋರ್ಟ್ ಚಾಟಿ ಬೀಸಿದೆ.

# ನಂಜೇಗೌಡ ತಾಣಗಳ ಮೇಲೆ ಇ.ಡಿ. ದಾಳಿ

**(1ನೇ ಪುಟದಿಂದ)** ಸ್ಥಳೀಯ ಪೊಲೀಸ ರಲ್ಲಿ ಎಫ್.ಐ.ಆರ್. ದಾಖಲಿಸಲಾಗಿತ್ತು. ಈ ಮಾಹಿತಿ ಸೇರಿದಂತೆ ಇತರೆ ಆರೋಪಗಳ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

# ಮನುಕುಲದ ಕಪಿಮುಷ್ಠಿಗೆ ಸಿಲುಕುವನೇ ಸೂರ್ಯ ?

ಆಂಜನೇಯ ದೇವರು ಸೂರ್ಯನ ಹಿಡಿದು ನುಂಗಲು ಪ್ರಯತ್ನ ನಡೆಸಿದ್ದು ಪುರಾಣಗಳಲ್ಲಿದೆ. ಸಾವಿರಾರು ವರ್ಷಗಳ ಹಿಂದೆ ಈ ಪುರಾಣಗಳನ್ನು ಬರೆಯಲಾಗಿತ್ತು. ಮುಂದೆ ಸಾವಿರಾರು ವರ್ಷಗಳ ನಂತರ ಸೂರ್ಯ ಮನುಷ್ಯನ 'ಕಪಿ ಮುಷ್ಠಿ'ಗೆ ಸಿಲುಕಲಿದ್ದಾನೆ ಎಂದು ಕೆಲ ವಿಜ್ಞಾನಿಗಳು ಅಂದಾಜಿಸಿದ್ದಾರೆ!

ವಿಜ್ಞಾನ ಮುಂದುವರೆದಂತೆ ಪುರಾಣ ಕಾಲದಲ್ಲಿ ಬಣ್ಣಿಸಲಾಗುತ್ತಿದ್ದ ಅದ್ಭುತ ಶಕ್ತಿಗಳು ದೊರೆಯುತ್ತಿರುವುದು



ಹೊಸದೇನೂ ಅಲ್ಲ. ಆದರೆ, ನಾವಿನ್ನೂ ನಾಗರಿಕತೆಯ ಹಾದಿಯಲ್ಲಿ ಅಂಬೆಗಾಲಿಡುತ್ತಿದ್ದೇವೆ. ನಾಗರಿಕತೆ ಮುಂದುವರೆದಂತೆ ಲಭ್ಯವಾಗಬಹುದಾದ ಶಕ್ತಿ, ಸಾಮರ್ಥ್ಯಗಳ ಅಂದಾಜು ಪುರಾಣಗಳ ಕಲ್ಪನೆಗಳನ್ನೂ ಮೀರುತ್ತವೆ.

1964ರಲ್ಲಿ ಸೋವಿಯತ್ ಖಗೋಳಶಾಸ್ತ್ರಜ್ಞ ನಿಕೊಲ್ಯೆ ಕರ್ದಶೇವ್ ಅವರು 'ಟ್ರಾನ್ಸ್‌ಮಿಷನ್ ಆಫ್ ಇನ್ಫಾರ್ಮೇಷನ್ ಬೈ ಎಕ್ಸ್‌ಟ್ರಾಟೆರೆಸ್ಟ್ರಿಯಲ್ ಸಿವಿಲೈಸೇಷನ್ಸ್' ಎಂಬ ಪ್ರಬಂಧ ಮಂಡಿಸಿದ್ದರು. ಮುಂದಿನ ದಿನಗಳಲ್ಲಿ ನಾಗರಿಕತೆಯು ಯಾವ ಮಟ್ಟಿಗಿನ ಇಂಧನ ಬಳಸಬಹುದು ಎಂಬುದನ್ನು ಅಂದಾಜಿಸಿದ್ದರು.

ನಾಗರಿಕತೆ ಬೆಳೆಯುತ್ತಾ ಹೋದಂತೆ, ಇಂಧನ ಬಳಕೆಯೂ ಹೆಚ್ಚಾಗುತ್ತದೆ. ಹೀಗಾಗಿ ಅತಿ ಹೆಚ್ಚು ಇಂಧನ ಬಳಸುವ ನಾಗರಿಕತೆಗಳು ಹೆಚ್ಚು ಮುಂದುವರೆದವು ಎಂದು ಹೇಳಬಹುದು. ಈ ಲೆಕ್ಕಾಚಾರ ಅನ್ಯಗ್ರಹ ಜೀವಿಗಳಿಗಷ್ಟೇ ಅಲ್ಲ, ಭೂಮಿಯ ಜೀವಿಗಳಿಗೂ ಅನ್ವಯವಾಗುತ್ತದೆ. ಕರ್ದಶೇವ್ ಅವರು 1964ರಲ್ಲಿ ರೂಪಿಸಿದ್ದ ನಾಗರಿಕತೆ ಮಾನದಂಡವನ್ನು ಹಲವು ಬಾರಿ ಪರಿವರ್ತಿಸುತ್ತಾ ಬರಲಾಗಿದೆ ಹಾಗೂ ಹೊಸ ಅಂಶ - ವಿಚಾರಗಳನ್ನು ಸೇರಿಸಲಾಗಿದೆ.

ಕರ್ದಶೇವ್ ಮೂರು ಹಂತಗಳಲ್ಲಿ ನಾಗರಿಕತೆಯನ್ನು ವಿಭಜಿಸಿದ್ದಾರೆ. ಮನುಕುಲ ಈ ನಾಗರಿತೆಯ ಮೊದಲ ಹಂತದಲ್ಲೂ ಬರುವುದಿಲ್ಲ! ಖಗೋಳಶಾಸ್ತ್ರಜ್ಞ ಕಾರ್ಲ್ ಸ್ಯಾಗನ್ ಅವರು ನಾಗರಿಕತೆಯ ಹಂತಗಳನ್ನು ದಶಮಾಂಶಗಳ ಹಂತಕ್ಕೆ ವಿಭಜಿಸಿದ್ದು, ಆ ಪ್ರಕಾರ ನಮ್ಮ ನಾಗರಿಕತೆ 0.72ರ ಹಂತದಲ್ಲಿದೆ.

ಭೂಮಿಯ ಮೇಲೆ ಬೀಳುವ ಸೂರ್ಯನ ಎಲ್ಲ ಬೆಳಕನ್ನು ಬಳಸಿಕೊಂಡಾಗ ಹಾಗೂ ಭೂಮಿಯ ಮೇಲಿನ ಎಲ್ಲ ಖನಿಜಗಳ ಬಳಕೆ ಸಾಧ್ಯವಾದಾಗ ನಾವು 1.0 ಹಂತದ ನಾಗರಿಕರಾಗುತ್ತೇವೆ ಎಂದು ಸ್ಯಾಗನ್ ಅಂದಾಜಿಸಿದ್ದಾರೆ.

ಇನ್ನು, 2.0 ಹಂತದ ನಾಗರಿಕರು ಸೂರ್ಯನಿಂದಲೇ ನೇರವಾಗಿ ಇಂಧನ ಪಡೆಯುತ್ತಾರೆ. ಸೂರ್ಯನ ಸುತ್ತ ಬಳೆಯ ಹೋಲುವ ಉಪಕರಣಗಳನ್ನು ಅಳವಡಿಸಿ ಅಗತ್ಯ ವಿದ್ಯುತ್ ಪಡೆಯುತ್ತಾರೆ. ಸೂರ್ಯನನ್ನೇ 'ಬ್ಯಾಟರಿ' ರೀತಿ ಬಳಸಿ ಪಡೆಯುವ ವಿದ್ಯುತ್ ಪ್ರಮಾಣವನ್ನು ಈಗ ಅಂದಾಜಿಸಲಿಕ್ಕೂ ಆಗದು. 1.0 ಹಂತದ ನಾಗರಿಕರನ್ನು ಹೋಲಿಸಿದರೆ, 2.0 ಹಂತದ ನಾಗರಿಕರು ಸಾವಿರ ಕೋಟಿ ಪಟ್ಟು ಹೆಚ್ಚು ಇಂಧನ ಬಳಸುತ್ತಾರೆ.

ಮೂರನೇ ಹಂತಕ್ಕೆ ತಲುಪುವ ನಾಗರಿಕತೆಗಳು, ತಮ್ಮ ಸುತ್ತಲಿನ ನಕ್ಷತ್ರ ಪುಂಜಗಳಲ್ಲಿರುವ ಎಲ್ಲಾ ಸೂರ್ಯಗಳಿಂದ ಇಂಧನ ಪಡೆಯುತ್ತಾರೆ. ಇವರು 2.0 ಹಂತದ ನಾಗರಿಕತೆಗಿಂತ ಸಾವಿರ ಕೋಟಿ ಪಟ್ಟು ಹೆಚ್ಚು ಇಂಧನ ಪಡೆಯುತ್ತಾರೆ ಎಂದು ಸ್ಯಾಗನ್ ಅಂದಾಜಿಸುತ್ತಾರೆ. ಈ ರೀತಿಯ ಅಂದಾಜುಗಳು ವೈಜ್ಞಾನಿಕ ಕಥಾನಕಗಳ ಹಂತಕ್ಕೆ ಬಂದು ನಿಲ್ಲುತ್ತವೆ.

ಈ ನಾಗರಿಕತೆಯ ಹಂತಗಳನ್ನು ದಾಟುವುದು ಸುಲಭವಲ್ಲ. 0.01ರಷ್ಟು ಹೆಜ್ಜೆ ಇಡಲಿಕ್ಕೂ ಕನಿಷ್ಠ ಐದು ವರ್ಷಗಳು ಬೇಕಾಗುತ್ತವೆ ಎಂಬ ಅಂದಾಜಿದೆ. ಸುಮಾರು 100-200 ವರ್ಷಗಳ ನಂತರವೇ ಭೂಮಿಯು 1.0 ನಾಗರಿಕತೆಯ ಹಂತ ತಲುಪಬಹುದು ಎಂದು ವಿಜ್ಞಾನ ಭವಿಷ್ಯಕಾರ ಮಿಚಿಯೋ ಕಾಕು ಹೇಳುತ್ತಾರೆ. ಭೂಗ್ರಹ ಜೀವಿಗಳು ಎರಡನೇ ಹಂತಕ್ಕೆ ಬರಲು ಸಾವಿರಾರು ವರ್ಷ ಹಾಗೂ ಮೂರನೇ ಹಂತಕ್ಕೆ ಬರಲು ಲಕ್ಷ ವರ್ಷಗಳು ಬೇಕಾಗಲಿವೆ ಎಂದು ಹೇಳಲಾಗುತ್ತಿದೆ.

ಕರ್ದಶೇವ್ ನಂತರ ಹಲವಾರು ವರ್ಷಗಳಲ್ಲಿ ಖಗೋಳಶಾಸ್ತ್ರಜ್ಞರು, ಭೌತಶಾಸ್ತ್ರಜ್ಞರು ಹಾಗೂ ವೈಜ್ಞಾನಿಕ ಭವಿಷ್ಯಕಾರರು ನಾಗರಿಕತೆಯ ಹಂತಗಳಿಗೆ ಹಲವಾರು ಅಂಶಗಳನ್ನು ಸೇರಿಸುತ್ತಾ ಬಂದಿದ್ದಾರೆ.

ಕೆಲ ವಿಜ್ಞಾನಿಗಳು ಈ ಮೂರೂ ಹಂತಗಳ ಆಚೆಗೂ ಇರುವ ನಾಗರಿಕತೆಗಳ ಚಿಂತನೆ ನಡೆಸಿದ್ದಾರೆ. ಅವರು ಈ ಹಂತಗಳನ್ನು ಏಳು ಹಂತಗಳಿಗೆ ಬೆಳೆಸಿದ್ದಾರೆ. ಏಳನೇ ಹಂತದಲ್ಲಿರುವ ನಾಗರಿಕರು ಸಮಯ ಹಾಗೂ ಬಾಹ್ಯಾಕಾಶವನ್ನೂ ಬದಲಿಸಿಕೊಳ್ಳಬಲ್ಲರು ಎಂದು ಅಂದಾಜಿಸಿದ್ದಾರೆ. ಈ ಹಂತದ ನಾಗರಿಕರು 'ಸೃಷ್ಟಿಕರ್ತ'ರ ಸಾಮರ್ಥ್ಯ ಹೊಂದಿರುತ್ತಾರೆ ಎಂದೂ ಹೇಳಲಾಗುತ್ತಿದೆ.

ಮುಂದಾನೊಂದು ಕಾಲದಲ್ಲಿ ಉನ್ನತ ನಾಗರಿಕತೆ ಹಂತ ತಲುಪುವವರು ರೋಗ - ರುಜಿನಗಳ ಮೀರಿ, ಕಾಲದ ಹಂಗು ದಾಟಿ, ಹುಟ್ಟು - ಸಾವುಗಳ ಸಂಕೋಲೆ ಮುರಿದು ತಾವು ಬಯಸಿದ್ದನ್ನೆಲ್ಲಾ ಕ್ಷಣದಲ್ಲೇ ಪಡೆಯುವ 'ಕಲ್ಪವೃಕ್ಷ'ದ ಮಾಲೀಕರಾಗಿರುತ್ತಾರೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

- ಎಸ್.ಎ. ಶ್ರೀನಿವಾಸ್

**ನಾಗರಿಕತೆಯ ಎರಡನೇ ಹಂತದಲ್ಲಿ ಸಾಧ್ಯ ಎನ್ನುವ ವಿಜ್ಞಾನಿಗಳು**



ಭೂ ಬಳಕೆಯ ನಾಗರಿಕ ಹಂತಗಳು ಭೌತಶಾಸ್ತ್ರಜ್ಞ ಜಾನ್ ಬ್ಯಾರೊ ಅವರು ಭೂಮಿಯ ಮೇಲೆ ಲಭ್ಯವಿರುವ ವಸ್ತುಗಳನ್ನು ಬಳಸಿಕೊಳ್ಳುವುದರ ಆಧಾರದ ಮೇಲೆ ನಾಗರಿಕತೆಗಳ ಹಂತ ವಿಭಜಿಸಿದ್ದಾರೆ. ಅವರ ಪ್ರಕಾರ, ಮೊದಲ ಹಂತದಲ್ಲಿ ಕಟ್ಟಡ ನಿರ್ಮಾಣ, ಗಣಿಗಾರಿಕೆ ಇತ್ಯಾದಿಗಳನ್ನು ನಡೆಸಲಾಗುತ್ತದೆ. ಎರಡನೇ ಹಂತದಲ್ಲಿ ಜೆನೆಟಿಕ್ ಇಂಜಿನಿಯರಿಂಗ್ ಹಾಗೂ ಕಸಿ ರೀತಿಯ ತಂತ್ರಜ್ಞಾನಗಳು ಉನ್ನತ ಹಂತಕ್ಕೆ ಬರುತ್ತವೆ. ಮೂರನೇ ಹಂತದಲ್ಲಿ ಅಣುಗಳನ್ನು ಪರಿವರ್ತಿಸಿ ಹೊಸ ವಸ್ತುಗಳನ್ನು ಸೃಷ್ಟಿಸಲಾಗುತ್ತದೆ.

# ಮುಂಗಡ ಪತ್ರಕ್ಕೆ ಸಿದ್ಧತೆ

**(1ನೇ ಪುಟದಿಂದ)** ಕುಮಾರಸ್ವಾಮಿ, ಇಡೀ ದಿನ ಸಭೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಪಸಂಖ್ಯಾತರ ಮತಗಳ ಜೊತೆಗೆ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದ ಮತಗಳನ್ನು ಗಟ್ಟಿ ಮಾಡಿಕೊಳ್ಳಲು ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಆಯಾ ಸಮಾಜಗಳಿಗೆ ಸೇರಿದ ಬೃಹತ್ ಸಮಾವೇಶ ನಡೆಸುವ ತಯಾರಿಯಲ್ಲಿ ಮಗ್ನರಾಗಿದ್ದರು.

ಎರಡೂ ಸಮಾವೇಶಗಳನ್ನು ಪಕ್ಷದ ವೇದಿಕೆಯಿಂದ ದೂರವಿಟ್ಟು ಸಮಾವೇಶ ಮಾಡುತ್ತಿರುವುದು ವಿಶೇಷವಾಗಿದೆ.

# ಬಿಜೆಪಿ ಸಚಿವಗೆ ಸೋಲು

**(1ನೇ ಪುಟದಿಂದ)** ಕಾಂಗ್ರೆಸ್ ಅಭ್ಯರ್ಥಿ ರೂಪಿಂದರ್ ಸಿಂಗ್ ಕೂನರ್ ಅವರು 94,950 ಮತಗಳನ್ನು ಪಡೆದಿದ್ದಾರೆ. ಬಿಜೆಪಿಯ ಸಿಂಗ್ 83,667 ಮತಗಳನ್ನಷ್ಟೇ ಪಡೆದಿದ್ದಾರೆ.

ಸಿಂಗ್ ಈ ಕ್ಷೇತ್ರದಲ್ಲಿ ಸೋಲು ಕಂಡಿರುವುದು ಎರಡನೇ ಬಾರಿ. 2018ರಲ್ಲಿ ಕೂನರ್ ತಂದೆ ಗುರ್ಮೀತ್ ಸಿಂಗ್ ವಿರುದ್ಧ ಸೋಲುಂಡಿದ್ದರು. ಈ ಬಾರಿಯೂ ಗುರ್ಮೀತ್ ಸಿಂಗ್ ಅವರಿಗೆ ಟಿಕೆಟ್ ನೀಡಲಾಗಿತ್ತು. ಆದರೆ, ಅವರು ನಿಧನರಾದ ಹಿನ್ನೆಲೆಯಲ್ಲಿ ಈ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು.

# ನಗರದಲ್ಲಿ ಇಂದು ಭೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ಕಾರ್ತಿಕೋತ್ಸವ

ರುದ್ರಭೂಮಿ ಪುಣ್ಯಕ್ಷೇತ್ರದಲ್ಲಿರುವ ಭೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿಯ ಕಾರ್ತಿಕೋತ್ಸವವನ್ನು ಇಂದು ರಾತ್ರಿ 8 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯದರ್ಶಿ ಕೆ. ಸಂತೋಷ್‌ಕುಮಾರ್ ತಿಳಿಸಿದ್ದಾರೆ.

# ಸಿರಿಗೆರೆಯ ಟಿ. ನೀಲಾಂಬಿಕೆ ಅವರಿಗೆ ಕದಳಿಶ್ರೀ ಪ್ರಶಸ್ತಿ

ದಾವಣಗೆರೆ ಕದಳಿ ಮಹಿಳಾ ವೇದಿಕೆಯು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆಯಾಗಿದ್ದು, ಕಳೆದ 15 ವರ್ಷಗಳಿಂದ ದಾವಣಗೆರೆಯಲ್ಲಿ ವಚನ ಸಾಹಿತ್ಯ, ಶರಣ ಸಂಸ್ಕೃತಿಯ ಅನುಷ್ಠಾನಕ್ಕಾಗಿ ವೈವಿಧ್ಯಮಯ ಕಾರ್ಯಕ್ರಮ ಗಳನ್ನು, ದತ್ತಿ ಉಪನ್ಯಾಸಗಳನ್ನು ವಚನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ವೇದಿಕೆಯು ಪ್ರತಿ ವರ್ಷ ಸಮಾಜದ ಓರ್ವ ಅಪೂರ್ವ ಸಾಧಕಿಯನ್ನು ಗುರುತಿಸಿ 'ಕದಳಿ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಾ ಬಂದಿದೆ.

ಅನ್‌ಮೋಲ್ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಯಶಾ ದಿನೇಶ್ ಹಾಗೂ ದಿನೇಶ್ ಸಿ. ಜಿ. ದಂಪತಿಗಳು ಈ ದತ್ತಿಯ ಸ್ಥಾಪಕರಾಗಿದ್ದಾರೆ. ಯಶಾರವರು ತಮ್ಮ ತಂದೆ ಪ್ರೊ. ಬಿ. ಕೆ. ಸಿದ್ದಪ್ಪ ಬಾಡ ಮತ್ತು ತಾಯಿ ಸಾವಿತ್ರಮ್ಮ ಸಿದ್ದಪ್ಪ ದಂಪತಿ ಹೆಸರಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಲಕ್ಷ ರೂ.ಗಳ 'ಕದಳಿಶ್ರೀ' ಪ್ರಶಸ್ತಿಯ ಶರಣ ದತ್ತಿಯನ್ನು ಸ್ಥಾಪಿಸಿದ್ದಾರೆ.

ಈ ಬಾರಿ 'ಕದಳಿ' ಪ್ರಶಸ್ತಿಗೆ ಸಿರಿಗೆರೆಯ ಎಂ.ಬಿ.ಆರ್. ಕಾಲೇಜಿನ ನಿವೃತ್ತ ಪ್ರಾಚಾರ್ಯರೂ, ಗಾಯಕರೂ, ವಾಗ್ಮಿಗಳೂ, ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರೂ ಆದ ಪ್ರೊ|| ಟಿ. ನೀಲಾಂಬಿಕೆ ಅವರು ಭಾಜನರಾಗಿದ್ದಾರೆ. ಇವರು ಟಿ. ಈಶ್ವರಯ್ಯ ಹಾಗೂ ಗಂಗಮ್ಮ ದಂಪತಿ ಪುತ್ರಿ, 1953 ಫೆಬ್ರವರಿ 13 ರಂದು ಶಿವಮೊಗ್ಗ ಜಿಲ್ಲೆಯ ಸೂಗೂರಿನಲ್ಲಿ ಜನಿಸಿದರು. ಇವರು ಸೂಗೂರಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿ, ಸಿರಿಗೆರೆಯಲ್ಲಿ ಪ್ರೌಢಶಾಲೆ, ಪಿಯುಸಿ ಮುಗಿಸಿ, ಬಿ.ಎ. ಪದವಿಯನ್ನು ಪಡೆದಿರುತ್ತಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ವೀಣಾ ಪಾಂಡಿತ್ಯವನ್ನು ಪಡೆದಿದ್ದಾರೆ. ಸಿರಿಗೆರೆಯ ಎಂ.ಬಿ.ಆರ್. ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಪ್ರಾಚಾರ್ಯರಾಗಿ ನಿವೃತ್ತರಾಗಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾ ಮಂಡಳಿಯ ಸದಸ್ಯರಾಗಿ, ಕನ್ನಡ ಅಧ್ಯಾಪಕರ ವೇದಿಕೆಯ ಉಪಾಧ್ಯಕ್ಷರಾಗಿ, ದಾವಣಗೆರೆ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಾಗಿದ್ದರು. ಇವರು ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ.



ಇವರು ಚಿಕ್ಕ ವಯಸ್ಸಿನಿಂದಲೇ ರಂಗಾಸಕ್ತಿಯನ್ನು ಬೆಳೆಸಿಕೊಂಡು ಕಲಾಸಂಘದಲ್ಲಿ ಕಲಾವಿದೆಯಾಗಿ ಅಭಿನಯ ಪ್ರಾರಂಭಿಸಿದರು. ಅಭಿನಯ, ಗಾಯನದಲ್ಲಿ ಆಸಕ್ತಿ ಹೊಂದಿದ್ದು, ಅಶೋಕ ಬಾದರದಿನ್ನಿಯವರ ಶಿಬಿರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಸಿರಿಗೆರೆಯ ತರಳಬಾಳು ಕಲಾ ಸಂಘದಲ್ಲಿ ಸೇವೆ ಸಲ್ಲಿಸಿದ್ದಾರೆ.

ತರಳಬಾಳು ತ್ರೈಮಾಸಿಕ ಪತ್ರಿಕೆಯ ಸಂಪಾದಕ ಮಂಡಳಿಯ ಲೇಖಕಿ ಮತ್ತು ಸದಸ್ಯೆಯಾಗಿದ್ದರು. ಸಿರಿಗೆರೆಯ ಅಕ್ಕನ ಬಳಗದ ಅಧ್ಯಕ್ಷೆ, ಉಪಾಧ್ಯಕ್ಷೆ, ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ಈಗ ಹಾಲಿ ಸದಸ್ಯೆಯಾಗಿದ್ದಾರೆ.

ತರಳಬಾಳು ಕಲಾ ಸಂಘದ ಎಲ್ಲಾ ನಾಟಕಗಳಿಗೂ ಬೇಕಾಗುವ ಸ್ತ್ರೀ ಪಾತ್ರಗಳಿಗೆ ಹಿನ್ನೆಲೆ ಗಾಯಕರನ್ನು ಸಂಘಟಿಸಿ ತರಬೇತಿ ನೀಡುತ್ತಿದ್ದರು. ವಿದ್ಯಾರ್ಥಿಗಳಿಗೆ ರಂಗ ಗೀತೆಗಳನ್ನು ಕಲಿಸಿ, ಕೆಲವು ರೂಪಕಗಳನ್ನು ಸಿದ್ಧಪಡಿಸುತ್ತಿದ್ದರು. 'ಶೂನ್ಯ ಸಂಪಾದನೆ' ಕೃತಿಯನ್ನು ರಂಗಕ್ಕೆ ಸ್ವತಃ ಇವರೇ ಪಾತ್ರಗಳನ್ನು ಸಿದ್ಧಗೊಳಿಸಿ ಪ್ರದರ್ಶನ ನೀಡುವಲ್ಲಿ ಅಳವಡಿಸಿ ಯಶಸ್ವಿಯಾಗಿದ್ದಾರೆ.

ಸಿರಿಗೆರೆಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ರಚಿಸಿರುವ 'ಮರಣವೇ ಮಹಾನವಮಿ', 'ವಿಶ್ವಬಂಧು ಮರುಳಸಿದ್ದ, 'ಶರಣಸತಿ ಲಿಂಗಪತಿ', ನಾಟಕಗಳಲ್ಲಿ ಪ್ರಧಾನ ಪಾತ್ರ ವಹಿಸಿ, ಹಿನ್ನಲೆ ಗಾಯಕಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಕಂಬಳಿ ನಾಗದೇವ, ಮೃಚ್ಛಕಟಿಕ, ತಲೆದಂಡ, ಉದ್ಭವ, ಜಲಗಾರ, ತಾಮ್ರಪತ್ರ, ಸುಲ್ತಾನ್ ಟಿಪ್ಪು, ಮಹಾಬೆಳಗು ನಾಟಕಗಳಲ್ಲಿಯೂ, ಶರಣ ಸಂಕುಲ ವಚನಾಂಜಲಿ, ಶಿವಸ್ವರದಲ್ಲಿನ ಗೀತ ರೂಪಕದಲ್ಲಿ ಮತ್ತು ಧ್ವನಿಸುರುಳಿಗಳಲ್ಲಿ ಹಾಡಿದ್ದಾರೆ. ಇವರ ಅಭಿನಯದ 'ಮರಣವೇ ಮಹಾನವಮಿ' ನಾಟಕ ಹಾಗೂ ಇತರೆ ನಾಟಕಗಳು ದೇಶಾದ್ಯಂತ ಸಾವಿರಕ್ಕೂ ಹೆಚ್ಚು ಪ್ರದರ್ಶನ ಕಂಡಿವೆ. ಧಾರವಾಡ, ಚಿತ್ರದುರ್ಗ ಆಕಾಶವಾಣಿಗಳಲ್ಲಿ ಮರಣವೇ ಮಹಾನವಮಿ ನಾಟಕ ಬಿತ್ತರಗೊಂಡಿದೆ. ಬೆಂಗಳೂರು ಮತ್ತು ಭದ್ರಾವತಿ ಆಕಾಶವಾಣಿಯಲ್ಲಿ ವಚನ ಗಾಯನ, ಚರ್ಚೆ, ನುಡಿ, ಚಿಂತನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

**ಪ್ರಶಸ್ತಿಗಳು :** 1971ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಲಿಂ. ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರಿಂದ 'ವಾಣಿಶ್ರೀ' ಬಿರುದಾಂಕಿತ ಚಿನ್ನದ ಪದಕ ಪಡೆದಿದ್ದಾರೆ.

2010ರಲ್ಲಿ ರಂಗಭೂಮಿಯ ಸೇವೆಗಾಗಿ ಚಿತ್ರದುರ್ಗ ಜಿಲ್ಲಾಡಳಿತ ನೀಡಿದ ಕನ್ನಡ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ. 2011-12ರಲ್ಲಿ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ. 2017-18ರಲ್ಲಿ ಕದಳಿ ಮಹಿಳಾ ವೇದಿಕೆ ಇವರಿಂದ 'ಕಾಯಕಶ್ರೀ' ಪ್ರಶಸ್ತಿ.

ರಾಜ್ಯಮಟ್ಟದ ಚರ್ಚಾ ಸ್ಪರ್ಧೆ, ವಚನ ಗಾಯನ, ಶಾಸ್ತ್ರೀಯ ಸಂಗೀತ, ಜಾನಪದ ಗೀತೆ, ನಾಟಕಗಳಲ್ಲಿ ಅನೇಕ ಬಹುಮಾನಗಳನ್ನು ಪಡೆದಿರುತ್ತಾರೆ. ಉತ್ತಮ ಲೇಖಕಿಯಾಗಿರುವ ಶರಣೆ ನೀಲಾಂಬಿಕೆಯವರು 'ಲಿಂಗವಂತ ಧರ್ಮ ಮತ್ತು ಯುವಕರು' ಮತ್ತು 'ಡೋಹರ ಕಕ್ಕಯ್ಯ' ಕೃತಿಗಳನ್ನು ರಚಿಸಿದ್ದಾರೆ.

ಹಬ್ಬ-ಹರಿದಿನಗಳು, ತರಳಬಾಳು ತ್ರೈಮಾಸಿಕ, ಸ್ಮರಣ ಸಂಚಿಕೆ, ಜೀವದ ಉಳಿವಿಗಾಗಿ ಅಳಿಲು ಸೇವೆ ಇವುಗಳಲ್ಲಿ ಬಿಡಿ ಲೇಖನಗಳನ್ನು ಬರೆದಿದ್ದಾರೆ. ಇವರ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಇವರ ಪತಿ ನಿವೃತ್ತ ಪ್ರಾಚಾರ್ಯರಾದ ಕುಮಾರಸ್ವಾಮಿ ಅವರು ಬೆಂಬಲ ನೀಡುತ್ತಿದ್ದಾರೆ. ಇವರ ಮಗಳು ವತ್ಸಲಾ ಉಮೇಶ್ ಬೆಂಗಳೂರಿನಲ್ಲಿದ್ದಾರೆ. ಪುತ್ರ ಗಿರಿನಾಥಾನಂದ ಅವರು ಸನ್ಯಾಸ ದೀಕ್ಷೆ ಪಡೆದು ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**- ಸೌಮ್ಯ ಸತೀಶ್,**
ಸಹ ಕಾರ್ಯದರ್ಶಿ, ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ, ದಾವಣಗೆರೆ.

## ನಗರದಲ್ಲಿ ಇಂದು ಕದಳಿಶ್ರೀ ಪ್ರಶಸ್ತಿ ಪ್ರದಾನ

ಕದಳಿ ಮಹಿಳಾ ವೇದಿಕೆಯ 15ನೇ ವಾರ್ಷಿಕೋತ್ಸವ ಹಾಗೂ ಕದಳಿ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವು ಇಂದು ಸಂಜೆ 4ಕ್ಕೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಗದಗಿನ ಅಧ್ಯಾತ್ಮ ವಿದ್ಯಾಶ್ರಮದ ಡಾ. ನೀಲಮ್ಮ ತಾಯಿ ಅಸುಂಡಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಐಎಎಸ್ ಅಧಿಕಾರಿ ಡಾ. ಸಿ. ಸೋಮಶೇಖರ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಭಾಗವಹಿಸುವರು.

ಸಿರಿಗೆರೆಯ ಎಂ.ಬಿ.ಆರ್. ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಪ್ರೊ. ಟಿ. ನೀಲಾಂಬಿಕೆ ಅವರಿಗೆ ಕದಳಿ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕದಳಿ ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಕಿರುವಾಡಿ ಗಿರಿಜಮ್ಮನವರ ಪ್ರಾಯೋಜಕತ್ವದಲ್ಲಿ ಕದಳಿ ಮಹಿಳಾ ವೇದಿಕೆಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಚಂದ್ರಿಕಾ ವಿವರಿಸಿದ್ದಾರೆ.

## ಕದಳಿಶ್ರೀ ಪ್ರಶಸ್ತಿ ದತ್ತಿದಾನಿಗಳ ಪರಿಚಯ



ಪ್ರೊ|| ಬಿ.ಕೆ.ಸಿದ್ದಪ್ಪ ಅವರು 26 ವರ್ಷಗಳ ಕಾಲ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ, ಸಿರಿಗೆರೆಯಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ, ನಂತರ ಪದವಿ ಕಾಲೇಜಿನ ಪ್ರಾಚಾರ್ಯರಾಗಿ ಸೇವೆ ನೀಡಿದ್ದಾರೆ. ಇವರು ಉತ್ತಮ ಕ್ರೀಡಾ ಪಟುವೂ, ರಂಗನಟರೂ, ಸಿರಿಕಂಠದ ಗಾಯಕರೂ, ಜನಪದ ಕಲೆಗಳಲ್ಲಿ ಪರಿಣಿತರೂ, ಸಂಘಟನಾಕಾರರೂ ಆಗಿದ್ದರು.

ಜೊತೆಗೆ ಅಣ್ಣನ ಬಳಗ, ತರಳಬಾಳು ಕಲಾಸಂಘ, ರೋಟರಿ ಸಂಸ್ಥೆಗಳಲ್ಲಿ ಸದಾ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ತರಳಬಾಳು ಬಡಾವಣೆಯಲ್ಲಿ ವಿವಿಧ ಸಮಾಜಮುಖಿ ಕಾರ್ಯ ಚಟುವಟಿಕೆಗಳನ್ನು ಕೈಗೊಂಡಿದ್ದರು. ವಿದ್ಯಾನಗರದಲ್ಲಿ ಪರಿಸರ ಕಾಳಜಿಯಿಂದ ಸಾವಿರಾರು ಸಸಿಗಳನ್ನು ನೆಡಿಸಿದ್ದರು. ಪ್ರತಿ ತಿಂಗಳು ಶಿವಗೋಷ್ಠಿ ಪ್ರಾರಂಭಿಸಿದರು. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಎಲ್ಲಾ ಕ್ಷೇತ್ರಗಳಲ್ಲಿಯೂ ಗಣನೀಯ ಸೇವೆ ಸಲ್ಲಿಸಿ, ಪರಿಪೂರ್ಣ ವ್ಯಕ್ತಿತ್ವ ಹೊಂದಿದ್ದ ಸಿದ್ದಪ್ಪನವರು ಮಾದರಿ ವ್ಯಕ್ತಿಯಾಗಿದ್ದರು.

ಸಿದ್ದಪ್ಪ ಅವರ ಧರ್ಮಪತ್ನಿ ಸಾವಿತ್ರಮ್ಮ ಉತ್ತಮ ಹಾಡುಗಾರರಾಗಿದ್ದು, ಸಿರಿಗೆರೆಯ ಅಕ್ಕನ ಬಳಗದ ಅಧ್ಯಕ್ಷರಾಗಿದ್ದರು. ಸರಳ, ಮಾತೃ ಹೃದಯದ, ಸಂಸ್ಕಾರವಂತ, ಶಾಂತಮೂರ್ತಿಯಾದ ಸಾವಿತ್ರಮ್ಮನವರು ಇನ್ನರ್‌ವ್ಹೀಲ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದಾವಣಗೆರೆಯ ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಯಶಾ ದಿನೇಶ್ ಅವರು ಕದಳಿ ಮಹಿಳಾ ವೇದಿಕೆಯ ಪ್ರಥಮ ಅಧ್ಯಕ್ಷರೂ, ಗೌರವ ಸಲಹೆಗಾರರೂ ಆಗಿದ್ದಾರೆ. ಇವರು ಕಂಪ್ಯೂಟರ್ ಇಂಜಿನಿಯರಿಂಗ್ ಪದವೀಧರೆಯಾಗಿದ್ದು, ಮುಂಬೈಯಲ್ಲಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಹಾಡುಗಾರಿಕೆ, ನೃತ್ಯ, ನಟನೆ, ಸಾಹಿತ್ಯ ರಚನೆ ಇವರ ಹವ್ಯಾಸಗಳಾಗಿದ್ದು, ಸುಶ್ರಾವ್ಯ ಸಂಗೀತ ವಿದ್ಯಾಲಯ ಪ್ರಾರಂಭಿಸಿ ಸಂಗೀತಾಸಕ್ತರಿಗೆ ಶಾಸ್ತ್ರೀಯ ಹಾಗೂ ಸುಗಮ ಸಂಗೀತವನ್ನು ಕಲಿಸುತ್ತಿದ್ದಾರೆ. ಯಶಾ ಅವರು ಕನ್ನಡ ಸಾಹಿತ್ಯ ಪರಿಷತ್ತು, ಸುಗಮ ಸಂಗೀತ ಪರಿಷತ್ತು, ಪಾರಂಪರಿಕ ವೈದ್ಯ ಪರಿಷತ್ತು, ಅಭಿಯಂತರಂಗ, ಮುಂಬೈಯ ಶರಣ ಸಂಕುಲ ಹೀಗೆ ಹಲವು ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. 2008ರಲ್ಲಿ ಕದಳಿ ಮಹಿಳಾ ವೇದಿಕೆ ಪ್ರಾರಂಭಿಸಿ, ವಚನ ಸಾಹಿತ್ಯ ಹಾಗೂ ಶರಣ ಸಂಸ್ಕೃತಿಯನ್ನು ಜನರಿಗೆ ತಲುಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದಾರೆ. ವೇದಿಕೆಗೆ ಶರಣ ಪರಂಪರೆಯ ಭದ್ರ ಬುನಾದಿ ಹಾಕಿದ್ದಲ್ಲದೆ ವಚನ ಶಿಬಿರಗಳನ್ನು ನಡೆಸುತ್ತಾ ವೇದಿಕೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ.

ಯಶಾ ಅವರ ಕಾರ್ಯಚಟುವಟಿಕೆಗಳಿಗೆ ಪತಿ ದಿನೇಶ್ ಅವರ ಪ್ರೋತ್ಸಾಹವಿದೆ. ದಿನೇಶ್ ಸಿ. ಜಿ. ಅವರು ಅನ್‌ಮೋಲ್ ವಿದ್ಯಾಸಂಸ್ಥೆ ಮತ್ತು ವಸತಿಯುತ ಶಾಲೆ ನಡೆಸುತ್ತಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ಸಹಾಯ ಹಸ್ತ ನೀಡುತ್ತಿದ್ದಾರೆ. ಈ ದಂಪತಿ ಉತ್ತಮ ಸಂಘಟನಾಕಾರರಾಗಿದ್ದು, ಈರ್ವರಿಗೂ ದಾವಣಗೆರೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಇವರಿಗೆ ಬೆಂಗಳೂರಿನ ವಂಡರ್‌ಲಾ ಸಂಸ್ಥೆಯಿಂದ 'ವಂಡರ್‌ಲಾ ಪರಿಸರ ಮತ್ತು ಶಕ್ತಿ ಸಂರಕ್ಷಣಾ ಪ್ರಶಸ್ತಿ', ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 'ಜಿಲ್ಲಾ ಪರಿಸರ ಸ್ನೇಹಿ ಶಾಲಾ ಪ್ರಶಸ್ತಿ' ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ.

# ಬಿಲ್ಕಿಸ್ ಬಾನೋ ಪ್ರಕರಣ : ಸುಪ್ರೀಂ ಕೋರ್ಟ್ ಪೀಠಕ್ಕೆ ದೋಷಿಯಿಂದ ದಾರಿ ತಪ್ಪಿಸುವ ಮಾಹಿತಿ

ನವದೆಹಲಿ, ಜ. 8 – ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ದೋಷಿಗಳ ಅವಧಿ ಪೂರ್ವ ಬಿಡುಗಡೆಗೆ ಸಂಬಂಧಿಸಿದಂತೆ ಇನ್ನೊಂದು ಪೀಠದಿಂದ 'ವಂಚನಾತ್ಮಕವಾಗಿ' ಆದೇಶ ಪಡೆಯಲಾಗಿತ್ತು ಎಂದು ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಕಳೆದ ಮೇ 13, 2022ರಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ (ಈಗ ನಿವೃತ್ತ) ಹಾಗೂ ವಿಕ್ರಮ್ ನಾಥ್ ಅವರನ್ನು ಒಳಗೊಂಡ ಪೀಠ ಆದೇಶವೊಂದನ್ನು ಹೊರಡಿಸಿ, ದೋಷಿಗಳ ಅವಧಿ ಪೂರ್ವ ಬಿಡುಗಡೆ ಅರ್ಜಿ ಪರಿಶೀಲಿಸುವಂತೆ ಗುಜರಾತ್ ಸರ್ಕಾರಕ್ಕೆ ತಿಳಿಸಿತ್ತು. ಗುಜರಾತ್‌ನಲ್ಲಿ ಘಟನೆ ಸಂಭವಿಸಿತ್ತು. ಈ ಹಿನ್ನೆಲೆಯಲ್ಲಿ ಗುಜರಾತ್ ಸರ್ಕಾರ ಜುಲೈ 9, 1992ರಂದು ಹೊಂದಿದ್ದ ನೀತಿಯ ಅನ್ವಯ ದೋಷಿಗಳ ಅವಧಿ ಪೂರ್ವ ಬಿಡುಗಡೆ ಮಾಡಬೇಕೆಂದು ದೋಷಿಗಳಲ್ಲಿ ಓರ್ವ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದ.

ದೋಷಿ ರಾಧೇಶ್ಯಾಮ್ ಷಾ ಮೊದಲು 2019ರಲ್ಲಿ ದಾಖಲಿಸಿದ್ದ ಅರ್ಜಿಯನ್ನು ತಳ್ಳಿ ಹಾಕಿದ್ದ ಗುಜರಾತ್ ಹೈಕೋರ್ಟ್, ಮಹಾರಾಷ್ಟ್ರ ಸರ್ಕಾರದ ಬಳಿ ಅರ್ಜಿ ದಾಖಲಿಸುವಂತೆ ತಿಳಿಸಿತ್ತು. 2020ರಲ್ಲಿ ಎರಡನೇ ಅರ್ಜಿಯನ್ನೂ ತಳ್ಳಿ ಹಾಕಲಾಗಿತ್ತು.

ನಂತರ ದೋಷಿ ಈ ವಿಷಯವನ್ನು ಮಹಾರಾಷ್ಟ್ರ ಸರ್ಕಾರದ ಬಳಿ ದಾಖಲಿಸಿದ್ದ. ಆದರೆ, ಸಿಬಿಐ ಹಾಗೂ ಮುಂಬೈನ ವಿಶೇಷ ನ್ಯಾಯಮೂರ್ತಿ (ಸಿಬಿಐ) ಅವಧಿಪೂರ್ವ ಬಿಡುಗಡೆಗೆ ಒಲವು ತೋರಿರಲಿಲ್ಲ. ನಂತರ ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಆದರೆ, ಮಹಾರಾಷ್ಟ್ರ ಸರ್ಕಾರದ ಬಳಿ ತೆರಳಿದ್ದನ್ನು ಮುಚ್ಚಿಡಲಾಗಿತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸುಪ್ರೀಂ ಕೋರ್ಟ್ ಎದುರು ದಾರಿ ತಪ್ಪಿಸುವ ಮಾಹಿತಿ ನೀಡಲಾಗಿತ್ತು ಹಾಗೂ ವಾಸ್ತವಾಂಶಗಳನ್ನು ಮುಚ್ಚಿಡಲಾಗಿತ್ತು. ಇದು ಈ ನ್ಯಾಯಾಲಯದ ಜೊತೆ ಮಾಡಿರುವ ವಂಚನೆ ಎಂದು ಪೀಠ ಹೇಳಿದೆ.

# ಕೇದಾರನಾಥ ದೇವಾಲಯದಲ್ಲಿ ಕಾರ್ತಿಕೋತ್ಸವ, ಪೂಜೆ



ದಾವಣಗೆರೆ, ಜ. 8- ನಗರದ ಶ್ರೀ ವೀರಮದಕರಿ ನಾಯಕ ವೃತ್ತದ ಬಳಿಯ ಶ್ರೀ ಕೇದಾರನಾಥ ದೇವಾಲಯ (ಶ್ರೀ ಚಂದ್ರಮೌಳೇಶ್ವರ ದೇವಾಲಯ ಪಕ್ಕ) ದಲ್ಲಿ ಶ್ರೀ ಸ್ವಾಮಿಗೆ ಅಭಿಷೇಕ ಮತ್ತು ಸಂಜೆ ಕಾರ್ತಿಕೋತ್ಸವವನ್ನು ವಿಶೇಷ ಪೂಜೆ ಹಾಗೂ ಅಲಂಕಾರದೊಂದಿಗೆ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಇಂದೂಧರ್ ನಿಶಾನಿಮಠ್ ಕುಟುಂಬದವರು, ರವೀಂದ್ರನಾಥ್ ಜಾಧವ್ ಸೇರಿದಂತೆ, ಅನೇಕ ಭಕ್ತರು ಪಾಲ್ಗೊಂಡು, ಭಕ್ತಿ ಸಮರ್ಪಿಸಿದರು.

# ಅರಣ್ಯ ಇಲಾಖೆ ಅಕ್ರಮಗಳ ದಾಖಲೆ ಕೊಡುತ್ತೇನೆ

ಬೆಂಗಳೂರು, ಜ. 8 - ಅರಣ್ಯ ಇಲಾಖೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಮಾಹಿತಿ, ದಾಖಲೆಗಳನ್ನು ಕೊಡುತ್ತೇನೆ, ತನಿಖೆ ಮಾಡುವ ದಮ್ಮು-ತಾಕತ್ತು ಇದೆಯಾ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತರೀಕೆರೆ ಅರಣ್ಯದಲ್ಲಿ ಮರಗಳನ್ನು ಕಡಿದ ಪ್ರಕರಣದಲ್ಲಿ ಸರ್ಕಾರದ ಅಧಿಕಾರಿಗಳೇ ಎಷ್ಟು ಜನ ಶಾಮೀಲಾಗಿದ್ದಾರೆ.



ಕಡಿದ ಆ ಮರಗಳಲ್ಲಿ ಅರ್ಧ ಭಾಗದಷ್ಟು ಮರಗಳು ಯಾವ ಶಾಸಕನ ಮನೆಗೆ ಹೋದವು? ಮನೆ ಕಟ್ಟುತ್ತಿದ್ದ ಶಾಸಕನ ಮನೆಗೆ ಮರಗಳು ಹೋಗಿವೆ ಎಂದವರು ಆರೋಪಿಸಿದರು. ದಾಖಲೆ ಇಲ್ಲದೆ ಮಾತನಾಡುವುದಿಲ್ಲ.

ಆ ಶಾಸಕ ಯಾರು ಎಂದು ಈಶ್ವರ್ ಖಂಡ್ರೆ ಅವರನ್ನೇ ಕೇಳಿ. ಕಡಿದ ಮರಗಳು ತರೀಕೆರೆಯಲ್ಲಿ ಯಾವ ಶಾಸಕನ ಮನೆಗೆ ಹೋದವು. ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಯಾಕೆ? ಎಂದು ಪ್ರಶ್ನಿಸಿದರು.


ಮರ ಕಡಿಯುವವರಿಗೆ ಕುಮಾರಸ್ವಾಮಿ ಬೆಂಬಲ ಕೊಡ್ತಿದ್ದಾರೆ ಎಂದು ಸಚಿವರು ಹೇಳಿದ್ದಾರೆ, ಮರ ಕಡಿಯುವವರಿಗಾಗಲೀ, ಅಕ್ರಮ ಚಟುವಟಿಕೆ ಮಾಡುವವರಿಗಾಗಲೀ ಬೆಂಬಲ ಕೊಡುವವನಲ್ಲ. ಈಶ್ವರ್ ಖಂಡ್ರೆಗೆ ಅವರಿಗೆ ಬಹುಶಃ ಮಾಹಿತಿ ಸರಿ ಯಾಗಿ ಇಲ್ಲ ಎಂದು ತರಾಟೆಗೆ ತೆಗೆದುಕೊಂಡರು.

# ಕೆ.ಆರ್.ಎಸ್.ನ 20 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧ : ಹೈಕೋರ್ಟ್ ಆದೇಶ

ಬೆಂಗಳೂರು, ಜ. 8 - ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆ ಸುತ್ತ ಮುತ್ತ 20 ಕಿಲೋ ಮೀಟರ್ ವ್ಯಾಪ್ತಿ ಯಲ್ಲಿ ಗಣಿಗಾರಿಕೆ ನಿಷೇಧಿಸಿ ರಾಜ್ಯ ಹೈಕೋರ್ಟ್ ಆದೇಶ ಹೊರಡಿಸಿದೆ.

ಮೈಸೂರು ಮಹಾರಾಜರ ಆಡಳಿತದಲ್ಲಿ ದೂರದೃಷ್ಟಿಯಿಂದ ನಿರ್ಮಾಣಗೊಂಡಿರುವ ಅಣೆಕಟ್ಟೆಯನ್ನು ಸಂರಕ್ಷಿಸುವುದು ಎಲ್ಲರ ಆದ್ಯ ಕರ್ತವ್ಯ ಎಂದು ನ್ಯಾಯಾಲಯ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಯಂಪ್ರೇರಿತವಾಗಿ ಅರ್ಜಿಯನ್ನು ಕೈಗೆತ್ತಿಕೊಂಡು ಗಣಿಗಾರಿಕೆ ಹಾಗೂ ಕ್ವಾರಿಯಿಂಗ್ ಸೇರಿದಂತೆ ಎಲ್ಲ ರೀತಿಯ ಗಣಿಗಾರಿಕೆಯನ್ನು ನಿಷೇಧಿಸಿ ಮಧ್ಯಂತರ ಆದೇಶ ಹೊರಡಿಸಿತು. ಕೃಷ್ಣರಾಜ ಸಾಗರ ಅಣೆಕಟ್ಟೆ ಈಗಾಗಲೇ ಸಂಕಷ್ಟದಲ್ಲಿದೆ, ಇಂತಹ ಸಂದರ್ಭದಲ್ಲಿ ಗಣಿಗಾರಿಕೆ ಹಾಗೂ ಸ್ಫೋಟ ನಡೆಸುವುದರಿಂದ ಜಲಾಶಯಕ್ಕೆ ಧಕ್ಕೆ ಆಗಲಿದೆ ಎಂದು ಅಭಿಪ್ರಾಯಪಟ್ಟಿದೆ. ಅಣೆಕಟ್ಟು ಸಂರಕ್ಷಣೆಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ನೆರವು ನೀಡಲು ನೇಮಕಗೊಂಡಿದ್ದ ಹಿರಿಯ ವಕೀಲ ಆದಿತ್ಯ ಸೋಂಧಿ ಅವರ ವರದಿ ಯನ್ನೇ ಆಧಾರವಾಗಿಟ್ಟು ಕೊಂಡು ಪೀಠ ಈ ಮಹತ್ತರ ಆದೇಶ ನೀಡಿತು. ಅಷ್ಟೇ ಅಲ್ಲದೆ, ವಿವಿಧ ನ್ಯಾಯಾಲಯ ಗಳಿಂದ ಅನುಮತಿ ಪಡೆದು ಯಾವುದೇ ರೀತಿಯ ಗಣಿಗಾರಿಕೆ ನಡೆಸುತ್ತಿದ್ದರೂ ಅವುಗಳನ್ನು ತಕ್ಷಣ ಸ್ಥಗಿತಗೊಳಿಸುವಂತೆ ಪೀಠ ಹೇಳಿದೆ.




**ಸೈಟು ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್
1) 120 ರಸ್ತೆಗೆ 40x60 ಉತ್ತರ
2) 60 ರಸ್ತೆಗೆ 40x40 ಕಾರ್ನರ್
3) 40 ಅಡಿ ರಸ್ತೆಗೆ 40x60 ದಕ್ಷಿಣ
4) 40x60 ಪಶ್ಚಿಮ, 5) 30x40 ದಕ್ಷಿಣ
ಕಿರಣ್ ಭೂಸನೂರು ( ಏಜೆಂಟ್)
98440 63409, 97315 63409

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ, ವಾಜಪೇಯಿ ಬಡಾವಣೆಯ (ಪಕ್ಕ) ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ, ದರ ಒಂದು ಅಡಿಗೆ 3200 ರೂ. ಗಳಲ್ಲಿ ಲಭ್ಯ. 30x40 ಪಶ್ಚಿಮ, 30x40 ದಕ್ಷಿಣ, 30x50 ಪೂರ್ವ, 30x50 ಉತ್ತರ-ಪೂರ್ವ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185

**Property Doctor / ಪ್ರಾಪರ್ಟಿ ಡಾಕ್ಟರ್**
ಈ ಸೈಟ್ ತೊಗೋಬಹುದಾ? ದಾಖಲೆಗಳು ಏನು ಬೇಕು? ಕಾನೂನು ಪ್ರಕಾರ ಸರಿ ಇದೇನಾ? ಲೋನ್ ಸಿಗುತ್ತಾ? ಈ ರೇಟಿಗೆ ನನ್ನ ಸೈಟ್ ಮಾರಾಟ ಮಾಡಬಹುದಾ? ಈ ಎಲ್ಲ ಮಾಹಿತಿಯನ್ನು ನಿಮಗೆ ಕೇವಲ 100/- ನಲ್ಲಿ ಕೊಡಲಾಗುವುದು
96325 54524

**'ಮಚ್ಚೆ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ತನ್ವಿತಾ ಲೇಡೀಸ್ ಪಿ.ಜಿ.**
ನಂ.17927, 1ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ. ವ್ಯಾಸಂಗದಲ್ಲಿ ತೊಡಗಿರುವ ವಿದ್ಯಾರ್ಥಿನಿಯರಿಗಾಗಿ, ಉದ್ಯೋಗಸ್ಥ ಮಹಿಳೆಯರಿಗಾಗಿ ನೂತನವಾಗಿ ಪ್ರಾರಂಭವಾಗಿದೆ. ಮೊದಲು ಬಂದವರಿಗೆ ಆದ್ಯತೆ. ಸಂಪರ್ಕಿಸಿ : ಶೀಲಾ ವೈ.
90087 93259

**ಸೈಟು ಮತ್ತು ಮನೆ ಮಾರಾಟಕ್ಕೆ ಇವೆ**
ಬಾಲಾಜಿ ಬಡಾವಣೆಯಲ್ಲಿ 30x50 ಪೂರ್ವ-ಪಶ್ಚಿಮ ಉತ್ತರ ಇವೆ. ವಿನಾಯಕ ಬಡಾವಣೆಯಲ್ಲಿ 40x60 ದಕ್ಷಿಣ, ಡಾಲರ್ಸ್ 44x60 ಪಶ್ಚಿಮ-ದಕ್ಷಿಣ ಕಾರ್ನರ್, 40x60 ಪೂರ್ವ, 25x60 ಪೂರ್ವ, MCC 'A' SS 'B' 30x40 ಉತ್ತರ ಮನೆ.
ಏಜೆಂಟರು S. ಯಲ್ಲೋಜಿರಾವ್
97418 11694

**HOUSE FOR RENT**
MCC 'A' Block, Near Ayyapa swamy temple. Independent fully furnished Vastu House with 2 Bedrooms, 3 Bathrooms, Pooja room. Cots, Beds, Dining Table, AC is fitted.
Ph: 9886264344

**WANTED**
Need Computer Operator
Near Ram & Co Circle, Davangere.
70221 58935

**ಕಟ್ಟಡ ಬಾಡಿಗೆಗೆ ಇದೆ**
ಪಿಯು. ಕಾಲೇಜು ಮತ್ತು ನೀಟ್ ಕೋಚಿಂಗ್ ತರಗತಿ ನಡೆಸಲು ಸುಸಜ್ಜಿತ ಕಟ್ಟಡ ಬಾಡಿಗೆಗೆ ಇದೆ.
ಡಿ.ಸಿ. ಆಫೀಸ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ
73383 89447, 78296 06346

**ಬೇಕಾಗಿದ್ದಾರೆ**
ಹೋಲ್‌ಸೇಲ್ ಮೆಡಿಕಲ್ ಫಾರ್ಮಾದಲ್ಲಿ ಆಫೀಸ್ ಕೆಲಸ ಮಾಡಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ 30 ವರ್ಷ ಒಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
98806 59221 / 93410 21860

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಡ್ರೈವರ್ ಬೇಕಾಗಿದ್ದಾರೆ**
ಆಪೇ ಗಾಡಿ ಓಡಿಸಲು ಲೈಸೆನ್ಸ್ ಉಳ್ಳ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ : 72596 35931

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗ-ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ : 91138 57837

**ಹೊಸ ಮನೆ ಮಾರಾಟಕ್ಕಿದೆ**
ಕಾರ್ನರ್ ಡೂಪ್ಲೆಕ್ಸ್ ಅಮರನಾಥ್ ಬಡಾವಣೆಯಲ್ಲಿ 30x34 ಪಶ್ಚಿಮ +ದಕ್ಷಿಣ ಕಾರ್ನರ್ ಡೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ.
9902999615, 9844633119

**ಕಮರ್ಷಿಯಲ್ ಬಿಲ್ಡಿಂಗ್ ಮಾರಾಟಕ್ಕಿದೆ**
ಹರಪನಹಳ್ಳಿ ಬಣಗಾರ್ ಪೇಟೆಯಲ್ಲಿ 95x19.4 ಅಂತಸ್ತಿನ ಹೊಸದಾಗಿ ಕಟ್ಟಿದ ಮಳಿಗೆಗಳು ಮಾರಾಟಕ್ಕಿವೆ. ಸಂಪರ್ಕಿಸಿ.
96326 73179

**ಮನೆ ಮಾರಾಟಕ್ಕಿದೆ**
ವಿನೋಬನಗರದ 4ನೇ ಮೇನ್, 2ನೇ ಕ್ರಾಸ್‌ನಲ್ಲಿ ಪೂರ್ವ ದಿಕ್ಕಿಗೆ ಆರ್‌ಸಿಸಿ ಮನೆ, 1BHK, 2 ಮನೆ ಮತ್ತು 1 ಖಾಲಿ ಜಾಗ ಮಾರಾಟಕ್ಕಿದೆ.
ಅಳತೆ 25 x 100
ಆಸಕ್ತರು ಸಂಪರ್ಕಿಸಿ :
86184 00519
93438 55613

**LAND FOR SALE**
4 Acre land for Sale Suitable for Layout @ Rs. 77 Lakhs/Acre
Sharma :
63608 66997

**ಅಡಿಕೆ ತೋಟ ಮಾರಾಟಕ್ಕಿದೆ**
3 1/4 ಎಕರೆ ಬೋರ್ ಸಾಗುವಾನಿ ಗಿಡ, ಮುಳ್ಳುತಂತಿ ಬೇಲಿ ಇರುವ ಫಸಲಿಗೆ ಬಂದಿರುವ ತೋಟ ಮಾರಾಟಕ್ಕಿದೆ. ದಾವಣಗೆರೆಯಿಂದ 18 ಕಿ.ಮೀ ದೂರದಲ್ಲಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
80880 78898

**ಜಮೀನು ಕೊಳ್ಳಲು ಬೇಕಾಗಿದೆ**
1 ಎಕರೆಯಿಂದ 20 ಎಕರೆವರೆಗೆ ದಾವಣಗೆರೆ ಹತ್ತಿರ
ಶರ್ಮಾ :
63608 66997


**ಮನೆ ಮಾರಾಟಕ್ಕಿದೆ**
ದಾವಣಗೆರೆ ಸಿಟಿ ಬಾಲಾಜಿ ನಗರದಲ್ಲಿ 30x50 ಪೂರ್ವ-ಉತ್ತರ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಮನೆ ಮಾರಾಟಕ್ಕಿದೆ. ಬೋರ್‌ವೆಲ್ ಮುನ್ಸಿಪಲ್ ನೀರಿನ ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
80880 78898

**ಬೇಕಾಗಿದ್ದಾರೆ**
ಮಗುವಿನ ಆರೈಕೆ ಮಾಡುವ ಕೆಲಸಕ್ಕೆ ಸ್ತ್ರೀಯರು ಬೇಕಾಗಿದ್ದಾರೆ
ಸಂಪರ್ಕಿಸಿ :
99865 99923
86609 98651

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
86609 98651
97436 54365

**ಸೈಟ್ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿ ಅಡಿಕೆ ತಟ್ಟೆ ಫ್ಯಾಕ್ಟರಿ ಸಮೀಪ 40x30 ಅಳತೆವುಳ್ಳ ಸೈಟ್ ಮಾರಾಟಕ್ಕಿದೆ.
ಸಂಪರ್ಕಿಸಿ :
70226 35055

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED**
Banking Sector Field Officer (Male Only)
Qualification : Any Degree.
90715 55081
Interview Time - 11AM

**ಮನೆ ಕೊಳ್ಳಲು ಬೇಕಾಗಿರುತ್ತದೆ**
@ಹರಿಹರ
Sharma :
63608 66997

**18 ಗುಂಟೆ ಜಮೀನು ಮಾರಾಟಕ್ಕಿದೆ**
ಬೂಸವ್ವನಹಟ್ಟಿ ಗ್ರಾಮ, ದಾವಣಗೆರೆಯಿಂದ 4 ಕಿ.ಮೀ. ದೂರ ಸರ್ವೆ. ನಂ. 2/18, 20 ಸಾವಿರ ಚ.ಅಡಿ. ಪೂರ್ವ ದಿಕ್ಕು, ಸಿಮೆಂಟ್ ರೋಡ್, ನೀರು/ಕರೆಂಟ್ ಸೌಲಭ್ಯವಿದೆ.
97403 71949, 97405 92589

**ಬೆಂಗಳೂರಿನಲ್ಲಿ ಕುಕ್ ಬೇಕಾಗಿದ್ದಾರೆ**
ವೆಜ್, ನಾನ್‌ವೆಜ್ ಗೊತ್ತಿರಬೇಕು 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ಸಂಬಳ : 15,000/- ಊಟ ರೂಂ, ಉಚಿತ
97400 98047

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**ತಕ್ಷಣ ಬೇಕಾಗಿದ್ದಾರೆ**
ಜಯನಗರದ ಬಡಾವಣೆ ದಾವಣಗೆರೆಯಲ್ಲಿ ಬರುವ MRP ಲಿಕ್ಕರ್ ಷಾಪ್ ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್, ಬಿಲ್ಲಿಂಗ್ ಆಪರೇಟರ್, ಕ್ಯಾಷಿಯರ್ ಹಾಗೂ ವೆಂಡರ್ ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆಕರ್ಷಕ ವೇತನಕೊಡಲಾಗುವುದು. ಸಂಪರ್ಕಿಸಿ :
78921 68970

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ :
86609 98651
97436 54365

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ಕಮರ್ಷಿಯಲ್ ಸೈಟ್ ಕೊಳ್ಳಲು ಬೇಕಾಗಿದೆ**
@ ದಾವಣಗೆರೆ @ ಹರಿಹರ
ಶರ್ಮಾ
63608 66997

**JOIN OUR TEAM**
We are Looking for
Graphic Designers, Digital Marketing, Video Editors, Accountant, Supervisors, Marketing
Basic Salary Starts from 15, 000/-upto 50,000/-
WE ARE HIRING
+ 91 97431 53987, +91 99019 11421

**ಮನೆ & ಆಫೀಸ್ ಕಾಂಪ್ಲೆಕ್ಸ್ ಬಾಡಿಗೆಗಿದೆ**
ಪಿ.ಬಿ. ರೋಡ್, ಟೆಲಿಫೋನ್ ಆಫೀಸ್ ಹತ್ತಿರ, ದಾವಣಗೆರೆ.
99640 28815
9900687196, 8088933543

**ಮನೆ ಬಾಡಿಗೆಗೆ**
ಚೌಕಿಪೇಟೆಯಲ್ಲಿ ಬೇವಿನ ಮರದ ಹತ್ತಿರ, 2 BHK, 1ನೇ ಮಹಡಿಯಲ್ಲಿ 2 ಮನೆ ಬಾಡಿಗೆಗೆ ಇವೆ.
94484 05913
94488 45062

**ಬೇಕಾಗಿದ್ದಾರೆ**
ರಾಜಲಕ್ಷ್ಮಿ ಫಾರ್ಮಾದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಬಿಲ್ಲಿಂಗ್ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ ಮತ್ತು ಸ್ಟಾಕ್ ತೆಗೆಯುವುದಕ್ಕೆ ಬೇಕಾಗಿದ್ದಾರೆ. (SSLC Pass or Fail) ವಿಳಾಸ : KTJ Nagara, 3rd main, 14th cross, Davanagere.
96060 48401

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

## ನಾಗನೂರಿನಲ್ಲಿ ಇಂದು-ನಾಳೆ ಉಮಾ ಮಹೇಶ್ವರ ಜಾತ್ರೆ




ದಾವಣಗೆರೆ ತಾಲ್ಲೂಕು ನಾಗನೂರು ಗ್ರಾಮದಲ್ಲಿ ಶ್ರೀ ಉಮಾ ಮಹೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಸ್ವಾಮಿ ಮತ್ತು ಗುರುಗಳ ಆಗಮನದೊಂದಿಗೆ ಉರುಳು ಸೇವೆ ಮಾಡುವವರಿಗೆ ನೀರು ಹಾಕುವುದು.

ಅದೇ ಸಮಯದಲ್ಲಿ ಹೆಣ್ಣುಮಕ್ಕಳು ಉರುಳು ಸೇವೆ ಮಾಡುವವರಿಗೆ ನೀರು ಹಾಕುವುದು. ಶ್ರೀ ಸ್ವಾಮಿಯನ್ನು ತೋಟದ ಮಠಕ್ಕೆ ಕರೆದೊಯ್ಯುವುದು. ನಂತರ ಮಠದಲ್ಲಿ ಗಂಗಾ ಪೂಜೆ ಮುಗಿಸಿ ಪ್ರಸಾದ ವಿನಿಯೋಗ ಆರಂಭ. ಮಧ್ಯಾಹ್ನ ಬೆಲ್ಲದ ಬಂಡಿ ಮೆರವಣಿಗೆ ನಡೆಯಲಿದೆ. ರಾತ್ರಿ 7 ರಿಂದ ಶ್ರೀ ದುರುಗಮ್ಮನ ಕಾರ್ತಿಕೋತ್ಸವ ಜರುಗುವುದು.

ನಾಳೆ ಬುಧವಾರ ಬೆಳಿಗ್ಗೆ 8 ರಿಂದ 3 ಗಂಟೆಯವರೆಗೆ ಮಠದಲ್ಲಿ ಪ್ರಸಾದ ವಿನಿಯೋಗ, ಮಧ್ಯಾಹ್ನ 12 ಗಂಟೆಯಿಂದ ವಾದ್ಯಗಳೊಂದಿಗೆ ಎತ್ತುಗಳ ಮೆರವಣಿಗೆ, 4 ಗಂಟೆಗೆ ಭಕ್ತಾದಿಗಳು ಮುಡುಪು, ಹರಕೆಯನ್ನು ಅರ್ಪಿಸುವುದು ಮತ್ತು ಗ್ರಾಮಸ್ಥರೆಲ್ಲರೂ ಸೇರಿ ಅದ್ಧೂರಿಯ ಮೆರವಣಿಗೆಯೊಂದಿಗೆ ಊರೊಳಗೆ ಬರಮಾಡಿಕೊಳ್ಳುವುದು. ಅಗಸಿ ಬಾಗಿಲಿನಲ್ಲಿ ಸ್ವಾಮಿಯ ಬಾವುಟ ಹರಾಜು ನಡೆಯಲಿದೆ. ನಂತರ ಭಕ್ತರಿಗೆ ಪ್ರಸಾದ ಹಮ್ಮಿಕೊಳ್ಳಲಾಗಿದೆ ಎಂದು ಎ.ಹೆಚ್. ವಸಂತಕುಮಾರ್, ಜೆ. ಉಮೇಶ್, ಎ. ಹನುಮಂತಪ್ಪ ತಿಳಿಸಿದ್ದಾರೆ.

## ಶಿಕ್ಷಕ ಅರುಣ್ ಅವರಿಗೆ ಅನಿತಾ ಕೌಲ್ ಪ್ರಶಸ್ತಿ ಪ್ರದಾನ



ಮಲೇಬೆನ್ನೂರು, ಜ.8- ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯು ಐಎಎಸ್ ಅಧಿಕಾರಿಯಾಗಿದ್ದ ಶ್ರೀಮತಿ ಅನಿತಾ ಕೌಲ್ ಅವರ ಸ್ಮರಣಾರ್ಥ ಕೊಡಮಾಡುವ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಹಿಂಡಸಘಟ್ಟ ಕ್ಯಾಂಪ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಬಿ. ಅರುಣ್ ಕುಮಾರ್ ಅವರಿಗೆ ಬೆಂಗಳೂರಿನಲ್ಲಿ ಶನಿವಾರ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಗತಿಪರ ಚಿಂತಕ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಅವರು ಪ್ರದಾನ ಮಾಡಿದರು.

## ಭರಮಸಾಗರದ ಕೆ.ಯು. ಶ್ರೀಧರಮೂರ್ತಿ ಅವರಿಗೆ ಪಿಹೆಚ್‌ಡಿ



ದಾವಣಗೆರೆ, ಜ.8- ಭರಮಸಾಗರದ ಕೆ.ಯು. ಶ್ರೀಧರಮೂರ್ತಿ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಹೆಚ್‌ಡಿ ಪದವಿಗೆ ಭಾಜನರಾಗಿದ್ದಾರೆ.

ಬುಡಕಟ್ಟು ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಗಂಗಾಧರ ದೈವಜ್ಞ ಅವರ ಮಾರ್ಗದರ್ಶನದಲ್ಲಿ ಶ್ರೀಧರಮೂರ್ತಿ ಅವರು ಶಾಸನಶಾಸ್ತ್ರ ವಿಭಾಗದಲ್ಲಿ ಮಂಡಿಸಿದ 'ಪ್ರಾಚೀನ ಕರ್ನಾಟಕದಲ್ಲಿ ಶಾಕ್ತ ಪರಂಪರೆ' ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ದೊರೆತಿದೆ. ನಾಡಿದ್ದು ದಿನಾಂಕ 10 ರಂದು ಜರುಗಲಿರುವ ಕನ್ನಡ ವಿಶ್ವವಿದ್ಯಾಲಯದ 32ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ, ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರುಗಳು ಪದವಿ ಪ್ರದಾನ ಮಾಡಲಿದ್ದಾರೆ.

ಶ್ರೀಧರಮೂರ್ತಿ, ಭರಮಸಾಗರ ಗ್ರಾಮದ ಬಡ್ತಿ ಮುಖ್ಯ ಶಿಕ್ಷಕರಾದ ಶ್ರೀಮತಿ ವಿ. ಎಂ. ಅಕ್ಕಮಹಾದೇವಿ ಹಾಗೂ ಭೂಮಾಪನ ಇಲಾಖೆ ನಿವೃತ್ತ ನೌಕರ ಕೆ.ಎಂ. ಉಮೇಶಚಾರ್ ದಂಪತಿ ಪುತ್ರ.

# ಕಾಡಾ ತೀರ್ಮಾನದಿಂದ ದಾವಣಗೆರೆ ಜಿಲ್ಲೆಯ ರೈತರಿಗೆ ಅನ್ಯಾಯ

ದಾವಣಗೆರೆ, ಜ. 8- ನೀರು ಹರಿಸುವ ಮತ್ತು ನಿಲ್ಲಿಸುವ ವಿಚಾರದಲ್ಲಿ ಭದ್ರಾ ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯದಿಂದ ದಾವಣಗೆರೆ ಜಿಲ್ಲೆಯ ರೈತರಿಗೆ ತೀವ್ರ ಅನ್ಯಾಯವಾಗಲಿದೆ ಎಂದು ರೈತ ಮುಖಂಡ ಬಿ.ಎಂ. ಸತೀಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ. 20 ರಿಂದ 12 ದಿನಗಳ ಕಾಲ ನೀರು ಹರಿಸುವುದು ಮತ್ತು 20 ದಿನ ನಿಲ್ಲಿಸುವುದು ಎಂಬ ಕಾಡಾ ಸಮಿತಿ ಸಭೆಯ ತೀರ್ಮಾನ ಸರಿಯಲ್ಲ ಎಂದರು.

ಕೇವಲ 12 ದಿನಗಳು ನೀರು ಹರಿಸಿದರೆ ದಾವಣಗೆರೆ ಭಾಗದ ಜಮೀನುಗಳಿಗೆ ನೀರು ತಲುಪುವುದಿಲ್ಲ. ಅಧಿಕಾರಿಗಳ ಹೇಳಿಕೆ ಪ್ರಕಾರ ಪ್ರತಿ ದಿನ ಎಡ ಮತ್ತು ಬಲದಂಡೆಗಳಿಗೆ ನೀರು ಬಿಡಲು 0.29 ಟಿಎಂಸಿ ನೀರು ಬೇಕಾಗುತ್ತದೆ. ಈಗ ಭದ್ರಾ ಜಲಾಶಯದಲ್ಲಿ ಬಳಕೆಗೆ ಬಾರದ ಡೆಡ್ ಸ್ಟೋರೇಜ್ ತೆಗೆದು ಬಳಕೆಗೆ ಬರುವ ನೀರು 21.54 ಟಿಎಂಸಿ ಇದೆ. ಇದನ್ನು ಪ್ರತಿ ದಿನ 0.29 ರಂತೆ 74 ದಿನಗಳು ಹರಿಸಬಹುದು. ಆದರೆ ಅಧಿಕಾರಿಗಳು 6.90 ಟಿಎಂಸಿ ನೀರನ್ನು ಕುಡಿಯುವ ನೀರಿಗೆ, ಕೈಗಾರಿಕೆಗೆಂದು ಮತ್ತು ಆವಿಯಾಗುವ ನೀರು 1.91 ಟಿಎಂಸಿ ಎಂದು ಮೀಸಲಿಟ್ಟು ಲೆಕ್ಕ ಮಾಡುತ್ತಿದ್ದಾರೆ.

ಕುಡಿಯುವ ನೀರಿಗಾಗಿ ಪ್ರತ್ಯೇಕ ನಾಲೆಯಲ್ಲಿ ನೀರು ಬಿಟ್ಟ ಉದಾಹರಣೆ ಜಲಾಶಯದ ಇತಿಹಾಸದಲ್ಲೇ ಇಲ್ಲ. ನಾಲೆಗೆ ನೀರು ಹರಿಸಿದಾಗ ಕುಡಿಯುವ ನೀರಿಗಾಗಿ ಸೂಳೆಕೆರೆ, ದಾವಣಗೆರೆ ಟಿವಿ ಸ್ಟೇಷನ್ ಕೆರೆ, ಕುಂದುವಾಡ ಕೆರೆ ಸೇರಿದಂತೆ ಇನ್ನಿತರೆ ಕೆರೆಗಳಿಗೆ ತುಂಬಿಸಿಕೊಳ್ಳಬಹುದು. ಆದ್ದರಿಂದ ಕುಡಿಯುವ ನೀರಿಗಾಗಿ ಪ್ರತ್ಯೇಕವಾಗಿ ನೀರು ಮೀಸಲಿಡುವ ಅವಶ್ಯಕತೆ ಇಲ್ಲ ಎಂದರು.

> **ನಾಳೆ ರೈತರ ಸಭೆ**
>
> ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 10 ರಂದು ಬೆಳಿಗ್ಗೆ 10.30 ಕ್ಕೆ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಸಭೆ ಕರೆಯಲಾಗಿದೆ. ಸಭೆಯ ನಂತರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

1.91 ಟಿಎಂಸಿ ನೀರು ಆವಿಯಾಗುತ್ತದೆ ಎನ್ನುವ ಲೆಕ್ಕಾಚಾರ ತಲೆ ಬುಡವಿಲ್ಲದ್ದು, ಇದು ರೈತರನ್ನು ಮೂರ್ಖರನ್ನಾಗಿಸುವ ಕುತಂತ್ರ ಎಂದು ಕಿಡಿಕಾರಿದರು.

ಆವಿಯಾಗುವ ನೀರನ್ನು ಲೆಕ್ಕ ಹಾಕುವ ಅಧಿಕಾರಿಗಳು ಡಿಸೆಂಬರ್ ತಿಂಗಳಿನಿಂದ ಮೇ ತಿಂಗಳವರೆಗೆ ಜಲಾಶಯಕ್ಕೆ ಬರುವ ಒಳಹರಿವಿನ ಪ್ರಮಾಣ ಲೆಕ್ಕ ಮಾಡದೇ ಮುಚ್ಚಿಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ಹರಿಸುವ ಎಡದಂಡೆಗೆ ಪ್ರತ್ಯೇಕ ವೇಳಾಪಟ್ಟಿ ನಿಗದಿ ಮಾಡಿದ್ದು, ಜನವರಿ 10 ರಿಂದಲೇ 16 ದಿನ ನೀರು ಹರಿಸುವುದು ಮತ್ತು 15 ದಿನ ನಿಲ್ಲಿಸುವುದು ಎಂದು ನಿರ್ಣಯಿಸಲಾಗಿದೆ. ಎಡದಂಡೆಗೆ ಮತ್ತು ಬಲದಂಡೆಗೆ ಬೇರೆ ಬೇರೆ ವೇಳಾಪಟ್ಟಿ ಪ್ರಕಟಣೆ ಮಾಡಿರುವುದು ಜಲಾಶಯದ ಇತಿಹಾಸದಲ್ಲಿಯೇ ಇದೇ ಮೊದಲು ಎಂದು ಹೇಳಿದರು.

**ಎಸ್ಸೆಸ್ಸೆಂ ನಿರ್ಲಕ್ಷ್ಯ:** ದಾವಣಗೆರೆ ಜಿಲ್ಲೆಯ ರೈತರ ಜೀವನಾಡಿ ಭದ್ರಾ ಜಲಾಶಯದಿಂದ ನೀರು ಹರಿಸಿ ಅಡಿಕೆ, ತೆಂಗು ಇತರೆ ಬಹು ವಾರ್ಷಿಕ ಬೆಳೆಗಳ ತೋಟಗಳನ್ನು ಭೀಕರ ಬರಗಾಲದ ಬೇಗುದಿಯಿಂದ ಉಳಿಸಿಕೊಳ್ಳಲು ನೆರವಾಗಬೇಕಿದ್ದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾಡಾ ಸಮಿತಿ ಸಭೆಗೆ ಗೈರು ಹಾಜರಾಗಿದ್ದಾರೆ. ಇದು ರೈತ ವಿರೋಧಿ ನಡೆಯಾಗಿದೆ ಎಂದು ಸತೀಶ್ ದೂರಿದರು

ಬರದಿಂದ ತತ್ತರಿಸಿರುವ ರೈತರ ಸಂಕಷ್ಟಕ್ಕೆ ಧಾವಿಸುವ ಇಚ್ಛಾಶಕ್ತಿ ಅವರಿಗಿಲ್ಲವಾಗಿದೆ. ರೈತರ ಹಿತ ಬಯಸದ ಇಂತವರು ಸಚಿವರಾಗಿ ಮುಂದುವರೆಯುವ ನೈತಿಕತೆ ಕಳೆದುಕೊಂಡಿದ್ದಾರೆ ಎಂದರು.

ದಾವಣಗೆರೆ ಜಿಲ್ಲೆಯ ಕೊನೆ ಭಾಗಕ್ಕೆ ತಿಂಗಳಿಗೊಂದು ಸಲವಾದರೂ ನೀರು ತಲುಪದಿದ್ದರೆ ಜಿಲ್ಲೆಯ ಬೋರ್‌ವೆಲ್ ಗಳು ಸಂಪೂರ್ಣ ವಿಫಲವಾಗುತ್ತವೆ. ಇದರಿಂದ ತೋಟಗಳು ನಾಶವಾಗುತ್ತವೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗಲಿದೆ. ಭದ್ರಾ ನೀರು ನಮ್ಮ ಹಕ್ಕು. ಜಲಾಶಯದಲ್ಲಿ ನೀರು ಇದೆ ಕೇಳುತ್ತೇವೆ. ರೈತರು ಬೀದಿಗಿಳಿದು ಹೋರಾಟ ಮಾಡಬೇಕೆಂದರು.

ಪತ್ರಿಕಾಗೋಷ್ಠಿಯಲ್ಲಿ ರೈತರ ಮುಖಂಡರಾದ ಲೋಕಿಕೆರೆ ನಾಗರಾಜ್, ಬೆಳವನೂರು ನಾಗೇಶ್ವರ ರಾವ್, ಹೆಚ್.ಆರ್. ಲಿಂಗರಾಜ್, ಕೆ.ಬಿ. ಕೊಟ್ರೇಶ್, ಧನಂಜಯ ಕಡ್ಲೇಬಾಳು, ಕುಂದುವಾಡದ ಹೆಚ್.ಜಿ. ಗಣೇಶಪ್ಪ, ಮಾಜಿ ಮೇಯರ್ ಗುರುನಾಥ್, ಕಲಪನಹಳ್ಳಿ ಮಂಜುನಾಥ್, ಕಲಪನಹಳ್ಳಿ ಸತೀಶ್, ಶಿರಮಗೊಂಡನಹಳ್ಳಿ ಮಂಜುನಾಥ್, ಹನುಮಂತಪ್ಪ, ಅಣ್ಣಪ್ಪ, ಮಹೇಶ್ ಮತ್ತಿತರರಿದ್ದರು.

## ಹರಿಹರದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಪಲ್ಲಕ್ಕಿ ಉತ್ಸವ



ಹರಿಹರ, ಜ.8- ಇಲ್ಲಿನ ತುಂಗಭದ್ರಾ ನದಿದಂಡೆ ಮೇಲಿರುವ ಶ್ರೀ ಸಂಗಮೇಶ್ವರ ದೇವಸ್ಥಾನ ಆವರಣದಲ್ಲಿ ನಡೆಯಲಿರುವ ಶ್ರೀ ಮಹೇಶ್ವರ ಜಾತ್ರೆ ಅಂಗವಾಗಿ ನಗರ ದೇವಸ್ಥಾನ ರಸ್ತೆಯ ರೇಣುಕಾ ಮಂದಿರ ದಿಂದ ಶ್ರೀ ಮಹೇಶ್ವರ ಸ್ವಾಮಿ ಪಲ್ಲಕ್ಕಿ ಮಹೋತ್ಸವದ ಮೆರವಣಿಗೆ ಸಡಗರ ಸಂಭ್ರಮದಿಂದ ಮತ್ತು ಶ್ರದ್ಧಾ ಭಕ್ತಿಯಿಂದ ಇಂದು ನಡೆಯಿತು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಕಾರ್ಯದರ್ಶಿ ವೀರೇಶ್ ಯಾದವಾಡ, ಉಪಾಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಚೇತನ್ ಮೂರ್ಕಲ್, ಜಿ.ಕೆ. ವೀರಣ್ಣ, ಫೈನಾನ್ಸ್ ಮಂಜುನಾಥ್ ಅಂಗಡಿ, ಹೆಚ್, ವಿ. ಸಂಜಯ್ಯ, ಕರಿಬಸಪ್ಪ ಕಂಚಿಕೇರಿ, ಹೊಳಗಡ್ಡಿ ಸಿದ್ದೇಶ್, ಜಿ.ಕೆ. ಮಲ್ಲಿಕಾರ್ಜುನ, ಕಂಚಿಕೇರಿ ಸಿದ್ದೇಶ್, ಕತ್ತಲಗೇರಿ ಶಿವಯೋಗಿ, ಶೇಖರಪ್ಪ ಹೋಟೆಲ್, ಗುರುಮೂರ್ತಿ, ಕೊಟ್ರೇಶ್, ಕುಂಬಾರ ಕರಿಬಸಪ್ಪ, ರೇವಣಸಿದ್ದಪ್ಪ ಬಾತಿ, ಮುರುಗೇಶಪ್ಪ, ಬಸವರಾಜಯ್ಯ, ಹಾಲಸ್ವಾಮಿ ಗುತ್ತೂರು, ಅರುಣ್ ಕುಮಾರ್, ಪರಶುರಾಮ್, ಶೇಖರಪ್ಪ, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಬಿಳೆಬಾಳ ಚಂದ್ರಶೇಖರ್ ಇತರರು ಹಾಜರಿದ್ದರು.

## ಯುವನಿಧಿ ಯೋಜನೆ : ಇಂದು ನೋಂದಣಿ ಅಭಿಯಾನ




ದಾವಣಗೆರೆ, ಜ. 8 - ಯುವನಿಧಿ ಯೋಜನೆಯಡಿ ನೋಂದಣಿಗಾಗಿ ನಾಳೆ ದಿನಾಂಕ 9 ರಿಂದ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ಮಹಾತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಐದನೇ ಗ್ಯಾರಂಟಿ ಯೋಜನೆಯಾದ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಲು ಡಿಸೆಂಬರ್ 26ರಿಂದ ಚಾಲನೆ ನೀಡಲಾಗಿದೆ. ಈ ಯೋಜನೆಯಡಿ 2023ನೇ ವರ್ಷದಲ್ಲಿ ಪದವಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ 3000 ರೂಪಾಯಿ ಹಾಗೂ ಡಿಪ್ಲೋಮಾ ತೇರ್ಗಡೆಯಾದವರಿಗೆ 1500 ರೂಪಾಯಿ ನಿರುದ್ಯೋಗ ಭತ್ಯೆ ನೀಡಲಾಗುವುದು.

ಯುವನಿಧಿ ಯೋಜನೆಗೆ ನೋಂದಣಿಯನ್ನು ಸೇವಾಸಿಂಧು ಪೋರ್ಟಲ್ ಮೂಲಕ ಕರ್ನಾಟಕ ಒನ್, ದಾವಣಗೆರೆ ಒನ್, ಗ್ರಾಮ ಒನ್, ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಮಾಡಬಹುದಾಗಿದೆ. ಈ ನೋಂದಣಿಗಾಗಿ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ನೋಂದಣಿ ಅಭಿಯಾನ ನಡೆಸಲಾಗುತ್ತಿದ್ದು, ಇಲ್ಲಿ ನಿರುದ್ಯೋಗಿಗಳು ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಅವರು ವಿವರಿಸಿದ್ದಾರೆ.

## ಶ್ರೀ ಬಸವೇಶ್ವರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಪರಮೇಶ್





ರಾಣೇಬೆನ್ನೂರು, ಜ.8- ನಗರದ ಶ್ರೀ ಬಸವೇಶ್ವರ ಅರ್ಬನ್ ಕೋ-ಆಪ್ ಬ್ಯಾಂಕ್ ಅಧ್ಯಕ್ಷರಾಗಿ ಪರಮೇಶ ಗೌಳಿ, ಉಪಾಧ್ಯಕ್ಷರಾಗಿ ಮಂಜುನಾಥ ಓಲೇಕಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ನಗರದಲ್ಲಿ ಇಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸಭೆ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆ ಇಂದು ಮಧ್ಯಾಹ್ನ 12 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಬೆಂಗಳೂರು ಕೇಂದ್ರ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅವರು ಈ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಹೊರಟ್ಟಿ ದುರ್ಗಾಂಬಿಕಾದೇವಿ, ಶ್ರೀ ಮರಿಯಮ್ಮ ದೇವಿ ಕಾರ್ತಿಕ

ಗಾಂಧಿ ನಗರದ 7ನೇ ಕ್ರಾಸ್‌ನಲ್ಲಿರುವ ಶ್ರೀ ಹೊರಟ್ಟಿ ದುರ್ಗಾಂಬಿಕಾದೇವಿ ಹಾಗೂ ಶ್ರೀ ಮರಿಯಮ್ಮ ದೇವಿಯ ಕಡೆ ಕಾರ್ತಿಕೋತ್ಸವವು ಇಂದು ಸಂಜೆ 8 ಗಂಟೆಗೆ ನಡೆಯಲಿದೆ.

## ಜಾಲಿನಗರದಲ್ಲಿ ಇಂದು ಕಡೆ ಕಾರ್ತಿಕೋತ್ಸವ

ದಾವಣಗೆರೆ ಜಾಲಿನಗರದ ಶ್ರೀ ಶಾಮನೂರು ಬಸವರಾಜಪ್ಪ ಉದ್ಯಾನವನದ ಬಳಿ ಇರುವ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ ನಡೆಯಲಿದೆ.

## ಚೌಡೇಶ್ವರಿ ದೇವಿಯ ಕಡೆ ಕಾರ್ತಿಕೋತ್ಸವ

ದಾವಣಗೆರೆ ವಿನೋಬನಗರದ 1ನೇ ಮುಖ್ಯರಸ್ತೆಯಲ್ಲಿರುವ ಶ್ರೀ ಚೌಡೇಶ್ವರಿ ದೇವಿಯ ಕಡೇ ಕಾರ್ತಿಕೋತ್ಸವವು ಇಂದು ರಾತ್ರಿ 8 ಗಂಟೆಗೆ ನಡೆಯಲಿದೆ.

## ನಗರದಲ್ಲಿ ಇಂದು ಸೈಕಲ್, ತಿಂಡಿ ಗಾಡಿಗಳ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟಿನಿಂದ 85ನೇ ಸೈಕಲ್ ಮತ್ತು 3 ತಿಂಡಿ ಗಾಡಿಗಳನ್ನು ವಿತರಿಸುವ ಕಾರ್ಯಕ್ರಮವನ್ನು ಕರುಣಾ ಜೀವಾ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯವನ್ನು ಶ್ರೀ ಪರಮೇಶ್ವರ ಸ್ವಾಮೀಜಿ (ಯರಗುಂಟೆ) ವಹಿಸುವರು. ಶಿವನಕೆರೆ ಬಸವಲಿಂಗಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಸಿ.ಎನ್. ಜಯಪ್ರಕಾಶ್, ಎ. ಕಿರಣ್‌ಕುಮಾರ್, ಡಾ. ಹೆಚ್.ಜಿ. ಶ್ರೀಕಂಠಪ್ಪ ಆಗಮಿಸುವರು. ಡಾ. ಹೆಚ್.ಎನ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು.

## ವಸತಿ ಯೋಜನೆ ರೂಪಿಸಲು ಆಗ್ರಹ

**ಹರಿಹರ**

ಹರಿಹರ, ಜ. 8- ತಾಲ್ಲೂಕಿನ ಕಡ್ಲೆಗೊಂದಿ, ಭಾನುವಳ್ಳಿ ಗ್ರಾಮಗಳ ನಿರ್ವಸತಿಕರಿಗೆ ವಸತಿ ಯೋಜನೆ ರೂಪಿಸಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ವತಿಯಿಂದ ನಗರಕ್ಕೆ ಇಂದು ಆಗಮಿಸಿದ್ದ ಉಪವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ಅವರಿಗೆ ಮನವಿ ಸಲ್ಲಿಸಲಾಯಿತು.

ಸಮಿತಿ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.





### ಕಾಯಿಪೇಟೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಕಾರ್ತಿಕೋತ್ಸವ

ದಾವಣಗೆರೆ ಕಾಯಿಪೇಟೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಕಾರ್ತಿಕೋತ್ಸವವು ಸೋಮವಾರ ರಾತ್ರಿ ವಿಜೃಂಭಣೆಯಿಂದ ಜರುಗಿತು.

# ಯಶ್ ಕಟೌಟ್ ಹಾಕುವ ವೇಳೆ ವಿದ್ಯುತ್ ತಗುಲಿ ಮೂವರ ಸಾವು



ಗದಗ, ಜ. 8 - ಚಿತ್ರನಟ ಯಶ್ ಹುಟ್ಟುಹಬ್ಬದ ಅಂಗವಾಗಿ ಲೋಹದ ಕಟೌಟ್ ಹಾಕುವಾಗ ವಿದ್ಯುತ್ ವೈರ್ ತಗುಲಿ ಮೂವರು ಯುವಕರು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಸೂರಣಗಿ ಗ್ರಾಮದಲ್ಲಿ ಭಾನುವಾರ ತಡರಾತ್ರಿ ನಡೆದಿದೆ.

ಮೃತರನ್ನು ಸೂರಣಗಿ ಗ್ರಾಮದ ಹನುಮಂತ ಹರಿಜನ (21), ಮುರಳಿ ನಡುವಿನಮನಿ (20) ಮತ್ತು ನವೀನ್ ಗಾಜಿ (19) ಎಂದು ಗುರುತಿಸಲಾಗಿದೆ. ಇತರೆ ಮೂವರು ಘಟನೆಯಲ್ಲಿ ಗಾಯಗೊಂಡಿದ್ದಾರೆ. ಸಾವಿಗೀಡಾದ ಮೂವರ ಸಾಮೂಹಿಕ ಅಂತ್ಯಕ್ರಿಯೆ ಮಾಡಲಾಗಿದೆ.

ಮೃತ ಯುವಕರ ಕುಟುಂಬದವರು ಬಡವರಾಗಿದ್ದು ಕೂಲಿ ಮಾಡಿಕೊಂಡು ಜೀವನ ನಡೆಸುವವರಾಗಿದ್ದಾರೆ. ಅವರ ಕುಟುಂಬಕ್ಕೆ ತಲಾ 2 ಲಕ್ಷ ರೂಪಾಯಿ ಪರಿಹಾರ ಮತ್ತು ಗಾಯಾಳುಗಳಿಗೆ ತಲಾ 50 ಸಾವಿರ ರೂಪಾಯಿ ಪರಿಹಾರವನ್ನು ಸರ್ಕಾರ ಘೋಷಿಸಿದೆ ಎಂದು ಗದಗ ಉಸ್ತುವಾರಿ ಸಚಿವ ಹೆಚ್.ಕೆ ಪಾಟೀಲ್ ತಿಳಿಸಿದ್ದಾರೆ.

ಘಟನೆಯ ಹಿನ್ನೆಲೆಯಲ್ಲಿ ಗ್ರಾಮಕ್ಕೆ ತೆರಳಿದ ಯಶ್, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ನಂತರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನನ್ನ ಹುಟ್ಟುಹಬ್ಬದ ದಿನ ಕಟೌಟ್ ಕಟ್ಟುವಾಗ ಮೂವರು ಅಭಿಮಾನಿಗಳು ನಿಧನರಾದ ಘಟನೆ ತೀವ್ರ ನೋವುಂಟು ಮಾಡಿದೆ. ಇನ್ನು ಮುಂದೆ ಈ ರೀತಿ ಕಟೌಟ್‌ಗಳನ್ನು ಹಾಕಬೇಡಿ ಎಂದು ಮನವಿ ಮಾಡಿಕೊಂಡಿದ್ದಾರೆ.

ಮೃತರ ಕುಟುಂಬದವರಿಗೆ ಅಗತ್ಯವಿರುವ ನೆರವು ನೀಡುವುದಾಗಿಯೂ ಯಶ್ ಇದೇ ವೇಳೆ ತಿಳಿಸಿದ್ದಾರೆ. ನಂತರ ಆಸ್ಪತ್ರೆಗೆ ತೆರಳಿ ಗಾಯಗೊಂಡವರ ಆರೋಗ್ಯವನ್ನು ವಿಚಾರಿಸಿದರು.

**ಮತ್ತೊಂದು ಅವಘಡ :** ಗಾಯಗೊಂಡವರ ಆರೋಗ್ಯ ವಿಚಾರಿಸಲು ಯಶ್ ತೆರಳುವ ವೇಳೆ ಮತ್ತೊಂದು ಅಪಘಾತ ಸಂಭವಿಸಿ, ಇನ್ನೋರ್ವ ಅಭಿಮಾನಿ ತೀವ್ರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. ನಿಖಿಲಗೌಡ ಭೀಮನಗೌಡ್ರ ಎಂಬ 22 ವರ್ಷದ ವ್ಯಕ್ತಿ ಯಶ್ ನೋಡಲು ಸ್ಕೂಟರ್‌ನಲ್ಲಿ ವೇಗವಾಗಿ ತೆರಳುತ್ತಿದ್ದರು. ಆಗ ಪೊಲೀಸ್ ವಾಹನಕ್ಕೆ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ.

## ಕೆ.ಬೇವಿನಹಳ್ಳಿಯಲ್ಲಿ ಇಂದು ಮಹೇಶ್ವರ ಸ್ವಾಮಿಯ ಜಾತ್ರೆ

ಹರಿಹರ ತಾಲ್ಲೂಕಿನ ಸುಕ್ಷೇತ್ರ ಕಾಶಿ ಬೇವಿನಹಳ್ಳಿ ಗ್ರಾಮದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆ ಇಂದು ಬೆಳಗ್ಗೆಯಿಂದ ರಾತ್ರಿವರೆಗೆ ಜರುಗಲಿದೆ. ನಾಳೆ ಬುಧವಾರ ಬೆಳಿಗ್ಗೆ 8 ಗಂಟೆಗೆ ಮಹೇಶ್ವರ ಸ್ವಾಮಿಗೆ ಮನೆಗಳಿಂದ ಎಡೆ ಕೊಡಲಾಗುವುದು. ನಂತರ ಬಾಯಿ ಬೀಗ, ದಿಂಡು ಉರುಳು ಸೇವೆ ನಡೆಯಲಿದ್ದು, ಸಂಜೆ 4 ಗಂಟೆಗೆ ಶ್ರೀ ರೇವಣಸಿದ್ದೇಶ್ವರ, ಶ್ರೀ ಬಸವೇಶ್ವರ ಸ್ವಾಮಿಯ ಮತ್ತು ಶ್ರೀ ಬೀರಲಿಂಗೇಶ್ವರ ಸ್ವಾಮಿಯ ರಥೋತ್ಸವ ಜರುಗಲಿದೆ. ರಾತ್ರಿ 10.30ಕ್ಕೆ ಗ್ರಾಮದ ಕಲಾವಿದರಿಂದ ನಾಟಕ ಪ್ರದರ್ಶನ ಇರುತ್ತದೆ.

## ನಗರದಲ್ಲಿ ಇಂದು ಮತ್ತು ನಾಳೆ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ

ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ವತಿಯಿಂದ ಇಂದು ಮತ್ತು ನಾಳೆ ನಗರದ ಪಿ.ಬಿ. ರಸ್ತೆಯ ಪೂಜಾ ಇಂಟರ್‌ನ್ಯಾಷನಲ್ ಪಕ್ಕದಲ್ಲಿರುವ ಶ್ರೀ ಮಹೇಶ್ವರ ಸ್ವಾಮಿಯ ನಿವೇಶನದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘ ತಿಳಿಸಿದೆ.

# ನಿವೇಶನಕ್ಕೆ ಆಗ್ರಹಿಸಿ ಜನಾಂದೋಲನ ಪ್ರತಿಭಟನೆ



ದಾವಣಗೆರೆ, ಜ. 8- ನಗರದ ವಿವಿಧ ಸ್ಲಂಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸವಾಗಿರುವ ನಿವೇಶನ ರಹಿತ ಬಡವರಿಗೆ ಸರ್ಕಾರದಿಂದ ಭೂಮಿ ಗುರುತಿಸಿ ನಿವೇಶನ ನೀಡುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸ್ಲಂ ಜನಾಂದೋಲನ ಕರ್ನಾಟಕ, ಸಾವಿತ್ರಿ ಬಾಪುಲೆ ಮಹಿಳಾ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಸ್ಲಂಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುವವರಿಗೆ ನಿವೇಶನ ನೀಡಲು ಮೊದಲ ಆದ್ಯತೆ ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸ್ಲಂ ನಿವಾಸಿಗಳು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಿವೇಶನ ನೀಡುವವರೆಗೂ ಧರಣಿ ಸತ್ಯಾಗ್ರಹ ಮಾಡುವ ತೀರ್ಮಾನಕ್ಕೆ ಬರಲಾಗಿದೆ. ಇದೇ ದಿನಾಂಕ 16 ರಿಂದ ಸುಮಾರು ಸಾವಿರ ಮಹಿಳೆಯರು ಮತ್ತವರ ಕುಟುಂಬದವರು ಧರಣಿಗೆ ಮುಂದಾಗಿದ್ದಾರೆಂದು ಸಂಘಟನೆಯ ಮುಖಂಡರು ಎಚ್ಚರಿಸಿದರು.

ಅಪರ ಜಿಲ್ಲಾಧಿಕಾರಿ ಲೋಕೇಶ್ ಅವರಿಗೆ ಎಸ್.ಎಲ್. ಆನಂದಪ್ಪ ಮುಖಂಡತ್ವದಲ್ಲಿ ವಿವಿಧ ಬೇಡಿಕೆಗಳಿರುವ ಮನವಿಯನ್ನು ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಎಸ್.ಎಲ್. ಆನಂದಪ್ಪ, ರೇಣುಕ ಯಲ್ಲಮ್ಮ, ಎಂ. ಶಬ್ಬೀರ್ ಸಾಬ್, ಬಾಲಪ್ಪ, ಮುನ್ನಾ ಸಾಬ್, ಚಮನ್ ಸಾಬ್, ಬೀಬಿಜಾನ್ ಮತ್ತಿತರರು ಪಾಲ್ಗೊಂಡಿದ್ದರು.

RELIANCE

ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕೆಲಸಕ್ಕೆ ಬೇಕಾಗಿದ್ದಾರೆ
ಲೈಫ್ ಪ್ಲಾನಿಂಗ್ ಆಫೀಸರ್
LIFE PLANNING OFFICER
ಮಹಿಳೆಯರಿಗೆ ಮಾತ್ರ...
ONLY FOR LADIES



* ಸಂಬಳ ತಿಂಗಳಿಗೆ ರೂ. 14,000 ದಿಂದ 18,000 (ಇಎಸ್ಐ,ಪಿಎಫ್ ಸೌಲಭ್ಯವಿರುತ್ತದೆ.)
* ವಯಸ್ಸು 30 ವರ್ಷದಿಂದ 45 ವರ್ಷದವರಿಗೆ ಮಾತ್ರ
* ವಿದ್ಯಾರ್ಹತೆ : ಯಾವುದೇ ಪದವೀಧರರು (Any Degree)
* ಕಂಪನಿಯ ಆನ್ ರೋಲ್, ನಿಗದಿತ ಸಂಬಳದ, ಖಾಯಂ ಹುದ್ದೆಯಾಗಿರುತ್ತದೆ. (Fixed Salary, Permanent Job)

BSC AVENUE
2nd floor, AVK College Road, Opp. : Chetana Hotel Davangere. Above State bank of India.
Ph. : 98440 98800

# ಸುಲಿಗೆ ನಡೆದ 5 ಗಂಟೆಯಲ್ಲಿಯೇ ಆರೋಪಿಯನ್ನು ಬಂಧಿಸಿದ ಪೊಲೀಸರು

**1.35 ಲಕ್ಷ ರೂ. ಬೆಲೆ ಬಾಳುವ ಸ್ವತ್ತು ವಶ**

ದಾವಣಗೆರೆ, ಜ.8- ಡ್ರಾಪ್ ಕೇಳುವ ನೆಪದಲ್ಲಿ ಸುಲಿಗೆ ಮಾಡಿದ್ದ ಆರೋಪಿಯನ್ನು ದೂರು ದಾಖಲಾದ ಐದು ಗಂಟೆಯಲ್ಲಿಯೇ ಬಂಧಿಸಿ, ಆತನಿಂದ 1.35 ಲಕ್ಷ ರೂ. ಬೆಲೆಯ ಸ್ವತ್ತು ವಶಪಡಿಸಿಕೊಂಡಿದ್ದಾರೆ.

ಅಜಾದ್ ನಗರದ ಬೂದಾಳ್ ರಸ್ತೆಯ ಪೆಟ್ರೋಲ್ ಬಂಕ್ ಹತ್ತಿರದ ವಾಸಿ ಹಸನ್ ಅಲಿ ಬಂಧಿತ ಆರೋಪಿಯಾಗಿದ್ದು, ಮತ್ತೊಬ್ಬ ಆರೋಪಿ ಪತ್ತೆ ಕಾರ್ಯವನ್ನು ಪೊಲೀಸರು ಮುಂದುವರೆಸಿದ್ದಾರೆ.

ಇದೇ ದಿನಾಂಕ 4ರಂದು ಸಂಜೆ 5 ಗಂಟೆ ವೇಳೆಗೆ ಜಿಎಂಐಟಿ ಕಾಲೇಜು ವಿದ್ಯಾರ್ಥಿ ಹರ್ಷಿತ್ ಕಾಲೇಜಿನಲ್ಲಿ ಇಂಟರ್ನಲ್ ಪರೀಕ್ಷೆ ಮುಗಿಸಿಕೊಂಡು ತನ್ನ ಬೈಕಿನಲ್ಲಿ ಹಾಗು ಮತ್ತೊಂದು ಬೈಕ್‌ನಲ್ಲಿ ಬಸವರಾಜ್ ಹಾಗೂ ಸ್ಟೀಫನ್ ಸ್ನೇಹಿತರು ಮನೆಗೆ ಹೋಗುತ್ತಿದ್ದಾಗ, ಅದೇ ಕಾಲೇಜಿನ ಹಿರಿಯ ವಿದ್ಯಾರ್ಥಿ ಅಲಿ ಡ್ರಾಪ್ ಕೇಳಿ ಕಿಯಾ ಷೋರೂಂ ಪಕ್ಕದ ಖಾಲಿ ಸೈಟುಗಳ ಬಳಿ ಕರೆದುಕೊಂಡು ಹೋಗಿ ಬೈಕ್ ನಿಲ್ಲಿಸಲು ಹೇಳಿದ್ದ.

ಬೈಕ್ ನಿಂತ ತಕ್ಷಣ ರಸ್ತೆಯಲ್ಲಿ ಗಿಡದ ಕೆಳಗೆ ಕೂತಿದ್ದ ವ್ಯಕ್ತಿ ತನ್ನ ಚಾಕು ತೋರಿಸಿ ಸ್ಟೀಫನ್ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು, ಹರ್ಷಿತ್ ಕೊರಳಿನಲ್ಲಿದ್ದ 10 ಗ್ರಾಂ ಬಂಗಾರದ ಚೈನ್ ಕಿತ್ತುಕೊಂಡು, ಅಲಿಗೆ ಡ್ರಾಪ್ ಮಾಡು ಎಂದು ಹೇಳಿ ಸ್ಟೀಫನ್ ಮೊಬೈಲನ್ನು ವಾಪಾಸ್ ಕೊಟ್ಟಿದ್ದಾನೆ. ಅಲಿ ಆ ವ್ಯಕ್ತಿಯನ್ನು ಡ್ರಾಪ್ ಮಾಡಿ ವಾಪಾಸ್ ಬಂದು ಬೈಕ್ ಕೊಟ್ಟಿದ್ದಾನೆ. ಈ ಕುರಿತು ಹರ್ಷಿತ್ ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಆರೋಪಿ ಪತ್ತೆ ಕಾರ್ಯದಲ್ಲಿ ವಿದ್ಯಾನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಭಾವತಿ.ಸಿ.ಶೇತಸನದಿ, ಪಿಎಸ್‌ಐ ವಿಶ್ವನಾಥ್ ಹೆಚ್.ಎಸ್., ವಿಜಯ್ ಎಂ., ಸಿಬ್ಬಂದಿಗಳಾದ ಆನಂದ ಮುಂದಲಮನಿ, ಮಲ್ಲಿಕಾರ್ಜುನ, ಭೋಜಪ್ಪ ಕಿಚಡಿ, ಮಂಜಪ್ಪ.ಟಿ, ಯೋಗೀಶ್ ನಾಯ್ಕ, ಗೋಪಿನಾಥ ಬಿ. ನಾಯ್ಕ, ಮಂಜುನಾಥ ಬಿ.ವಿ ಇದ್ದರು.

# ಕಳಪೆ ಗುಣಮಟ್ಟದ ಗೊಬ್ಬರ ಪೂರೈಸಿದರೆ ಕ್ರಮ



## ಗುತ್ತಿಗೆದಾರರಿಗೆ ಶಾಸಕ ಕೆ.ಎಸ್.ಬಸವಂತಪ್ಪ ಎಚ್ಚರಿಕೆ

ದಾವಣಗೆರೆ, ಜ. 8- ರಾಜ್ಯ ಸರ್ಕಾರ ತೆಂಗು ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದು, ತೆಂಗು ಬೆಳೆಯುವ ರೈತರಿಗೆ ಕಳಪೆ ಗುಣಮಟ್ಟದ ಕ್ರಿಮಿನಾಶಕ, ಬೇವಿನ ಹಿಂಡಿ, ಗೊಬ್ಬರ ಪೂರೈಸಿದ ಬಗ್ಗೆ ಗಮನಕ್ಕೆ ತಂದರೆ ಅಂತವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಮಾಯಕೊಂಡದ ಶಾಸಕ ಕೆ.ಎಸ್. ಬಸವಂತಪ್ಪ ಎಚ್ಚರಿಕೆ ನೀಡಿದರು.

ನಗರದ ತೋಟಗಾರಿಕೆ ಇಲಾಖೆಯ ಕಚೇರಿಯಲ್ಲಿ ಸೋಮವಾರ 2023-24ನೇ ಸಾಲಿನ ತೆಂಗು ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು ಕುರಿತು ಆಯೋಜಿಸಿದ್ದ ತರಬೇತಿ ಹಾಗೂ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ತೆಂಗು ಇಳುವರಿ ಹೆಚ್ಚು ಬರಲಿ ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ತೆಂಗು ಬೆಳೆಯುವ ರೈತರ ಒಂದು ಎಕರೆಗೆ 17ಸಾವಿರ ರೂ. ವೆಚ್ಚದ ಕ್ರಿಮಿನಾಶಕ, ಬೇವಿನ ಹಿಂಡಿ, ಗೊಬ್ಬರ ಪೂರೈಸಲು ಗುತ್ತಿಗೆ ನೀಡಿದ್ದು, ಗುತ್ತಿಗೆದಾರರು ಕಳಪೆ ಗುಣಮಟ್ಟದ ಬೇವಿನ ಹಿಂಡಿ, ಗೊಬ್ಬರ, ಕ್ರಿಮಿನಾಶಕ ಪೂರೈಸಬಾರದು. ಕಳಪೆ ಗುಣ ಮಟ್ಟದ ಬೇವಿನ ಹಿಂಡಿ, ಗೊಬ್ಬರ, ಕ್ರಿಮಿನಾಶಕ ಪೂರೈಸಿದ ಬಗ್ಗೆ ಈ ಹಿಂದೆ ರೈತರಿಂದ ಆರೋಪ ಗಳು ಕೇಳಿ ಬಂದಿದ್ದವು. ಗುತ್ತಿಗೆದಾರರು ಇದಕ್ಕೆ ಅವಕಾಶ ಮಾಡಿಕೊಡದಂತೆ ಗುಣಮಟ್ಟದ ಬೇವಿನ ಹಿಂಡಿ, ಕ್ರಿಮಿನಾಶಕ, ಗೊಬ್ಬರ ವಿತರಿಸಬೇಕೆಂದು ಸೂಚನೆ ನೀಡಿದರು.

ತೆಂಗು ಬೆಳೆಯುವುದರಿಂದ ರೈತರು ಆರ್ಥಿಕವಾಗಿ ಸದೃಢರಾಗಬಹುದು. ಜಮೀನಿನ ಬದುಗಳಲ್ಲಿ ಅಥವಾ ಒಂದೆರಡು ಎಕರೆ ಜಮೀನುಗಳಲ್ಲಿ ತೆಂಗು ಬೆಳೆದರೆ ಬೇರೆ ಬೆಳೆ ಬೆಳೆಯುವ ಜೊತೆಗೆ ಇದರಿಂದ ಲಾಭ ಪಡೆಯ ಬಹುದು. ಈ ನಿಟ್ಟಿನಲ್ಲಿ ರೈತರು ತಮ್ಮ ಜಮೀನಿನ ಬದುಗಳಲ್ಲಿ ತೆಂಗು ಬೆಳೆದು ಆರ್ಥಿಕವಾಗಿ ಸಬಲರಾಗಬೇಕೆಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಅರ್ಹ ರೈತರಿಗೆ ಬೇವಿನ ಹಿಂಡಿ, ಮೈಕ್ರೋ ಗೊಬ್ಬರ, ಕ್ರಿಮಿನಾಶಕ ವಿತರಿಸಲಾಯಿತು. ಈ ವೇಳೆ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಾದ ರೇಷ್ಮಾ ಫರ್ವೀನ್ ಹಾಗೂ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬಾಂಗ್ಲಾ ಚುನಾವಣೆ : ವಿಪಕ್ಷ ರಹಿತ ಚುನಾವಣೆಯಲ್ಲಿ ಹಸೀನಾಗೆ ಗೆಲುವು



ಢಾಕಾ, ಜ. 8 – ಬಾಂಗ್ಲಾದೇಶದ ಚುನಾವಣೆಯಲ್ಲಿ ಅವಾಮಿ ಲೀಗ್ ಪಕ್ಷ ಭಾರೀ ಬಹುಮತ ಗಳಿಸಿದ್ದು, ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರು ಸತತ 4ನೇ ಬಾರಿ ಪ್ರಧಾನ ಮಂತ್ರಿಯಾಗಲಿದ್ದಾರೆ. ಆದರೆ, ಪ್ರತಿಪಕ್ಷವಾದ ಬಿ.ಎನ್.ಪಿ. ಹಾಗೂ ಅದರ ಮಿತ್ರಪಕ್ಷಗಳು ಚುನಾವಣೆಗೆ ಬಹಿಷ್ಕಾರ ಹಾಕಿದ್ದವು ಮತ್ತು ಹಲವೆಡೆ ಹಿಂಸಾಚಾರದ ಘಟನೆಗಳು ನಡೆದಿದ್ದವು.

299 ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ಹಸೀನಾ ಅವರ ಪಕ್ಷ 223 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಅಭ್ಯರ್ಥಿಯ ಸಾವಿನ ಕಾರಣದಿಂದಾಗಿ ಒಂದು ಕ್ಷೇತ್ರಕ್ಕೆ ಚುನಾವಣೆ ನಡೆದಿರಲಿಲ್ಲ. ಪ್ರಮುಖ ಪ್ರತಿಪಕ್ಷವಾದ ಜತಿಯ ಪಾರ್ಟಿ 11 ಸ್ಥಾನ ಪಡೆದಿದೆ. ಬಾಂಗ್ಲಾದೇಶ ಕಲ್ಯಾಣ್ ಪಾರ್ಟಿ ಒಂದು ಕ್ಷೇತ್ರದಲ್ಲಿ ಗೆಲುವು ಕಂಡಿದೆ. ಸ್ವತಂತ್ರ ಅಭ್ಯರ್ಥಿಗಳು 62 ಸ್ಥಾನಗಳಲ್ಲಿ ಗೆಲುವು ಗಳಿಸಿದ್ದಾರೆ.

ಹಸೀನಾ ಅವರು ಗೋಪಾಲ್‌ಗಂಜ್ - 3 ಕ್ಷೇತ್ರದಿಂದ ಎಂಟನೇ ಬಾರಿ ಶಾಸನಸಭೆಗೆ ಆಯ್ಕೆಯಾಗಿದ್ದಾರೆ. ಹಸೀನಾ ಅವರು 2009ರಿಂದ ದೇಶದ ಪ್ರಧಾನ ಮಂತ್ರಿಯಾಗಿದ್ದಾರೆ.

1996ರ ನಂತರ ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಅತಿ ಕಡಿಮೆ ಮತದಾನವಾಗಿದೆ. ಅಂದಿನ ಚುನಾವಣೆಯಲ್ಲಿ ಶೇ.26.5ರಷ್ಟು ಮತದಾನವಾಗಿತ್ತು.

ಭಾನುವಾರ ನಡೆದ ಚುನಾವಣೆಯಲ್ಲಿ ಮಧ್ಯಾಹ್ನ 3 ಗಂಟೆಯವರೆಗೆ ಶೇ.27.15ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿತ್ತು. ಆದರೆ, ನಂತರ ಶೇ.40ರಷ್ಟು ಮತದಾನವಾಗಿದೆ ಎಂದು ತಿಳಿಸಲಾಗಿತ್ತು.

ಈ ಚುನಾವಣೆ ನಕಲಿ ಎಂದು ಮಾಜಿ ಪ್ರಧಾನ ಮಂತ್ರಿ ಖಲೀದಾ ಜಿಯಾ ನೇತೃತ್ವದ ಬಿ.ಎನ್.ಪಿ. ಪಕ್ಷ ಟೀಕಿಸಿದೆ. ಸರ್ಕಾರದ ವಿರುದ್ಧ ಶಾಂತಿಯುತ ಹೋರಾಟ ನಡೆಸುವುದಾಗಿ ಪಕ್ಷ ಹೇಳಿದೆ.

ಚುನಾವಣೆಯಲ್ಲಿ ಹಸೀನಾ ಅವರ ಪಕ್ಷ ಭಾರೀ ಬಹುಮತ ಗಳಿಸಿದೆ. ಆದರೆ, ಅನಿರೀಕ್ಷಿತವಾಗಿ ಸ್ವತಂತ್ರ ಅಭ್ಯರ್ಥಿಗಳು ಹೆಚ್ಚು ಸ್ಥಾನ ಗಳಿಸಿದ್ದಾರೆ. ಇದು ಆಡಳಿತಾರೂಢ ಪಕ್ಷದಲ್ಲೇ ಆಂತರಿಕ ಸ್ಪರ್ಧೆಗೆ ಕಾರಣವಾಗುವ ಸಾಧ್ಯತೆಯೂ ಇದೆ.

# ನಗರದ ಮುದ್ನಾಳ್ ಬಸವಣ್ಣ ದೇವಸ್ಥಾನದಲ್ಲಿಂದು ಮಹೇಶ್ವರ ಜಾತ್ರೆ






ಎಸ್.ಎಸ್. ಬಡಾವಣೆ 'ಎ' ಬ್ಲಾಕ್ ನ ಮುದ್ನಾಳ್ ಬಸವಣ್ಣ ದೇವಸ್ಥಾನದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇಂದು ಜರುಗಲಿದೆ.

ಶಾಮನೂರು ಗ್ರಾಮಸ್ಥರು, ಬಡಾವಣೆಗಳ ನಾಗರಿಕರ ಸಹಕಾರದೊಂದಿಗೆ ಮಹೇಶ್ವರ ಸ್ವಾಮಿ ಜಾತ್ರೆ ನಡೆಯಲಿದೆ ಎಂದು ಶಾಮನೂರು ಮುದ್ನಾಳ್ ಬಸವಣ್ಣ ದೇವರ ಅಭಿವೃದ್ಧಿ ಸಮಿತಿ ಸಂಸ್ಥಾಪಕ ಅಧ್ಯಕ್ಷರೂ ಆದ ದೂಡಾ ಮಾಜಿ ಅಧ್ಯಕ್ಷ ಜಿ.ಹೆಚ್. ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಶಾಮನೂರು ಟಿ. ಬಸಪ್ಪ ಅವರುಗಳು ತಿಳಿಸಿದ್ದಾರೆ.

# ಕಾಳಿಕಾದೇವಿ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ



ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಶ್ರೀ ಕಾಳಿಕಾ ದೇವಿಯ ಕಡೇ ಕಾರ್ತಿಕೋತ್ಸವ ಇಂದು ನಡೆಯಲಿದೆ. ಬೆಳಿಗ್ಗೆ ಪ್ರಾತಃ ಕಾಲದಲ್ಲಿ ಶ್ರೀ ಅಮ್ಮನವರಿಗೆ ವೇದೋಕ್ತ ಪಂಚಾಮೃತ ಅಭಿಷೇಕ, ವಿಶ್ವಕರ್ಮ ಅಷ್ಟೋತ್ತರ ಪೂಜೆ, ಪುಷ್ಪಾಲಂಕಾರ, ವಿಶೇಷ ಪೂಜಾ ಅಲಂಕಾರ, ಮಹಾಮಂಗಳಾರತಿ, ರಾತ್ರಿ 8 ಗಂಟೆಗೆ ದೀಪಾರಾಧನೆ, ಕಾರ್ತಿಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

# ಇಂದು ನಗರದೇವತೆ ಶ್ರೀ ದುಗ್ಗಮ್ಮ ದೇವಿ ಕಾರ್ತಿಕ



ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಕಡೇ ಕಾರ್ತಿಕೋತ್ಸವವು ಇಂದು ರಾತ್ರಿ 8:30 ಗಂಟೆಗೆ ನೆರವೇರಲಿದೆ.

ಟ್ರಸ್ಟ್‌ನ ಗೌರವ ಅಧ್ಯಕ್ಷರೂ ಆದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಟ್ರಸ್ಟ್‌ನ ಕಾರ್ಯಾಧ್ಯಕ್ಷರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಕಾರ್ತಿಕೋತ್ಸವಕ್ಕೆ ಚಾಲನೆ ನೀಡುವರು ಎಂದು ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

# ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಗೆ ಆಯ್ಕೆ : ಪ್ರತಿ ಹೆಕ್ಟೇರ್‌ಗೆ 7 ಲಕ್ಷ ಘಟಕ ವೆಚ್ಚ



ದಾವಣಗೆರೆ, ಜ.8- ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮೀನು ಮರಿ ಸಾಕಾಣಿಕೆಗೆ ಫಾರಂ ಪಾಂಡ್ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿದ ಜಿಲ್ಲೆಯ ರೈತರನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಫಲಾನುಭವಿಗಳ ಆಯ್ಕೆ ಸಭೆಯಲ್ಲಿ ಮಾತನಾಡಿದ ಅವರು, ಮತ್ಸ್ಯ ಸಂಪದ ಯೋಜನೆಯಡಿ ಪ್ರತಿ ಹೆಕ್ಟೇರ್‌ಗೆ ಮೀನು ಕೃಷಿಗಾಗಿ 7 ಲಕ್ಷ ರೂ. ಘಟಕ ವೆಚ್ಚ ನಿಗದಿ ಮಾಡಲಾಗಿದೆ.

ಈ ಯೋಜನೆಯಡಿ ಸೌಲಭ್ಯ ಪಡೆಯಲು ಕೆರೆ ಅಥವಾ ಅಚ್ಚುಕಟ್ಟು ಪ್ರದೇಶದಲ್ಲಿ ಜಮೀನು ಹೊಂದಿರಬೇಕು. ಸಾಮಾನ್ಯ ವರ್ಗದವರಿಗೆ ಘಟಕ ವೆಚ್ಚದಲ್ಲಿ ಶೇ.40 ರಷ್ಟು, ಪ.ಜಾ, ಪ.ಪಂ ಹಾಗೂ ಮಹಿಳಾ ಫಲಾನುಭವಿಗಳಿಗೆ ಶೇ.60 ರಷ್ಟು ಸಬ್ಸಿಡಿಯನ್ನು ನೀಡಲಾಗುತ್ತದೆ ಎಂದರು.

ದಾವಣಗೆರೆ ಜಿಲ್ಲೆಗೆ ಒಟ್ಟು 25 ಎಕರೆಯವರೆಗೆ ಮತ್ಸ್ಯ ಸಂಪದ ಯೋಜನೆಯಡಿ ಮೀನು ಕೃಷಿಗೆ ಅವಕಾಶ ಇದ್ದು, ಈಗ 10 ಜನರು ಮಾತ್ರ ಅರ್ಜಿ ಸಲ್ಲಿಸಿದ್ದು, 4.2 ಹೆಕ್ಟೇರ್‌ಗೆ ಅನುಮತಿ ನೀಡಲಾಗಿದೆ. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ಯೋಜನಾಧಿಕಾರಿ ಶಾರದಮ್ಮ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಡಿ.ಅಣ್ಣಪ್ಪಸ್ವಾಮಿ ಉಪಸ್ಥಿತರಿದ್ದರು.

# ಮೀಸಲಾತಿ: ಶ್ರೀ ಜಯಮೃತ್ಯುಂಜಯ ಸ್ವಾಮೀಜಿಯಿಂದ ಹೆದ್ದಾರಿಯಲ್ಲಿ ಲಿಂಗಪೂಜೆ



ರಾಣೇಬೆನ್ನೂರು, ಜ.8- ಪಂಚಮಸಾಲಿ ಎಲ್ಲ ಲಿಂಗಾಯತರಿಗೆ ಓಬಿಸಿ ಮೀಸಲಾತಿ ಕೊಡುವಂತೆ ಒತ್ತಾಯಿಸಿ, ಇದೇ ದಿನಾಂಕ 12 ರ ಶುಕ್ರವಾರ ಮೋಟೆಬೆನ್ನೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಲಿಂಗಪೂಜೆ ಮಾಡುವುದರೊಂದಿಗೆ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಜಿಲ್ಲಾ ಮಟ್ಟದಲ್ಲಿ ಶಾಂತಿಯುತವಾಗಿ ಪೂಜೆಯೊಂದಿಗೆ ಹೆದ್ದಾರಿ ಬಂದ್ ಮಾಡುವುದರ ಮೂಲಕ ಒತ್ತಾಯಿಸಲಾಗುವುದು ಎಂದು ಹೇಳಿದರು. ಶ್ರೀಗಳ ಜೊತೆಗೆ ಸಮಾಜ ಮುಖಂಡರಾದ ಕೆ. ಶಿವಲಿಂಗಪ್ಪ, ಶಿವಪ್ಪ ಗುರಿಕಾರ, ಸಿದ್ದು ಚಿಕ್ಕಬಿದರಿ, ಬಿ.ಎನ್.ಪಾಟೀಲ ಮತ್ತಿತರರಿದ್ದರು.

# ಕುಂಬಳೂರಿನ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ ಸುವರ್ಣಮ್ಮ





ಮಲೇಬೆನ್ನೂರು, ಜ.8- ಕುಂಬಳೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಶ್ರೀಮತಿ ಸುವರ್ಣಮ್ಮ ಗಂಗಾಧರ್ ಮತ್ತು ಉಪಾಧ್ಯಕ್ಷರಾಗಿ ಕೆ.ಚಿಕ್ಕಣ್ಣ ಅವರು ಇಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾದ ಕೆ.ಎಸ್.ಉಮಾಪತಿ, ಹೆಚ್. ರಮೇಶ್, ಹಳೇಮನೆ ಸಿದ್ದಪ್ಪ, ಎನ್.ಆಂಜನೇಯ, ಕೆ.ಮಹೇಂದ್ರಪ್ಪ, ಕೆ.ಜಿ.ಕರಿಬಸಪ್ಪ, ಶ್ರೀಮತಿ ಸುಮಂಗಳಮ್ಮ ಉಮಾಪತಿ, ಆರ್.ಹನುಮೇಶಿ, ಗಾಳೆಪ್ಪರ ಕುಬೇರಪ್ಪ ಮತ್ತು ಸಂಘದ ಕಾರ್ಯದರ್ಶಿ ಮಂಜುನಾಥ್, ಸಹಾಯಕ ಜಗದೀಶ್ ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು ಮಹೇಶ್ವರ ಸ್ವಾಮಿ ಜಾತ್ರೆ



ಕಾಯಿಪೇಟೆ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ವತಿಯಿಂದ ಪಿ.ಬಿ. ರಸ್ತೆಯ ಪೂಜಾ ಇಂಟರ್‌ನ್ಯಾಷನಲ್ ಪಕ್ಕದಲ್ಲಿರುವ ಶ್ರೀ ಮಹೇಶ್ವರ ಸ್ವಾಮಿಯ ನಿವೇಶನದಲ್ಲಿ ಇಂದು ಮತ್ತು ನಾಳೆ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆ ನಡೆಯಲಿದೆ.

# ಹಿರೇತೊಗಲೇರಿಯಲ್ಲಿ ಇಂದು-ನಾಳೆ ಮಹೇಶ್ವರ ಜಾತ್ರೆ

ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದಲ್ಲಿ ಇಂದು ಮತ್ತು ನಾಳೆ ಎರಡು ದಿನಗಳ ಕಾಲ ಮಹೇಶ್ವರನ ಜಾತ್ರೆಯನ್ನು ಏರ್ಪಡಿಸಲಾಗಿದೆ ಎಂದು ಮಹೇಶ್ವರ ಜಾತ್ರಾ ಸಮಿತಿಯವರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಶ್ರೀ ಕಟ್ಟೆ ದುರುಗಮ್ಮ ದೇವಿ ಕಡೇ ಕಾರ್ತಿಕ



ಹೊಂಡದ ರಸ್ತೆಯ ಶ್ರೀ ಕಟ್ಟೆ ದುರುಗಮ್ಮದೇವಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವವು ಇಂದು ರಾತ್ರಿ 8 ಗಂಟೆಗೆ ನಡೆಯಲಿದೆ.


**ಬೇಕಾಗಿದ್ದಾರೆ**

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (FULL TIME)

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ.

96861 95329

**REQUIRED**

OUTDOOR SALES MANAGERS

for Nilkamal FURNITURE IDEAS

WALK IN INTERVIEW

On 09.01.2024

Time 10.30 AM onwards

Both Male / Female Candidates can attend.

Nilkamal Furniture Exclusive Showroom

SS Layout "B" Block Ring Road,

Opp. : Sharadamba Temple, Davangere.

Mob. : 82967 09299

ಆರೋಗ್ಯದ ಹಾದಿಯು ಇಲ್ಲಿಂದ ಪ್ರಾರಂಭವಾಗುತ್ತದೆ ನಮ್ಮ ಹಿರಿಯ ಮೆಡಿಕಲ್ ಆಂಕೊಲಾಜಿಸ್ಟನ್ನು ಸಂಪರ್ಕಿಸಿ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

**ಡಾ|| ಪ್ರಸಾದ್ ಪಿ ಗುಣಾರಿ**

ಎಂಡಿ, ಡಿಎಂ (ಮೆಡಿಕಲ್ ಆಂಕೊಲಾಜಿ), ಅಡ್ಯಾರ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್, ಚೆನ್ನೈ

ಯುರೋಪಿಯನ್ ಸೊಸೈಟಿ ಆಫ್ ಮೆಡಿಕಲ್ ಆಂಕೊಲಾಜಿ (ESMO) ನ ಸದಸ್ಯ

15 ವರ್ಷಗಳ ಪರಿಣತಿ

- ಘನ ಮಾರಕತೆಗಳಿಗೆ ಚಿಕಿತ್ಸೆ (ಕ್ಯಾನ್ಸರ್ ಟ್ಯೂಮರ್ಸ್)
- ಟಾರ್ಗೆಟೆಡ್ ಥೆರಪಿ
- ವೈಯಕ್ತಿಕ ಅನುಗುಣಗಳಿಗೆ ತಕ್ಕಂತೆ ಕೀಮೋಥೆರಪಿ ಚಿಕಿತ್ಸೆ ವ್ಯವಸ್ಥೆ
- ಇಮ್ಯುನೊಥೆರಪಿ

ದಾವಣಗೆರೆಯ ನಂಜಪ್ಪ ಹಾಸ್ಪಿಟಲ್ಸ್ ನಲ್ಲಿ ಅಪಾಯಿಂಟ್‌ಮೆಂಟ್ ಕಾಯ್ದಿರಿಸಲು

08192-260111 ಗೆ ಕರೆ ಮಾಡಿ




ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ

08192-260111/7022260111


|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಅರವತ್ತನೇ ವರ್ಷದ ಪುಣ್ಯಸ್ಮರಣೆ



**ಲಿಂ. ಪುರಾಣಿಕ ಮಠದ ವೀರಯ್ಯನವರು**

ಎಲ್‌ಐಸಿ ಬ್ರಾಂಚ್ ಮ್ಯಾನೇಜರ್

ಹಗಲು-ಇರುಳುಗಳು ಕಳೆದು ಮೂಡುತ್ತಿರುವ ಹೊಸತಿನಂತೆ ನಿಮ್ಮ ನೆನಪು ನಮಗೆಲ್ಲಾ ದಾರಿದೀಪವಾಗಿದೆ. ನೀವು ಕಣ್ಮರೆಯಾಗಿ ಅರವತ್ತು ವರ್ಷಗಳು ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ಉಳಿದಿದೆ. ಕಷ್ಟ-ಸುಖಗಳ ತೊಳಲಾಟದ ಬದುಕಿಗೆ ನಿಮ್ಮ ಮನೋಬಲ ನಮ್ಮಗಳಿಗೆ ದೃಢತೆ ನೀಡಿದೆ. ನಿಮ್ಮ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ.

ಶ್ರೀಮತಿ ಪುರಾಣಿಕ್ ಮಠದ ಶಶಿಕಲಾ ರುದ್ರಯ್ಯ ಮತ್ತು ಮಕ್ಕಳು
ಶ್ರೀ ಪುರಾಣಿಕ್ ಮಠದ ಶಿವಕುಮಾರ್, ಶ್ರೀಮತಿ ನಿರ್ಮಲ ಮತ್ತು ಮಕ್ಕಳು
ಶ್ರೀಮತಿ ಪುರಾಣಿಕ ಮಠದ ಗೀತಾ ಪ್ರಭುಸ್ವಾಮಿ ಮತ್ತು ಮಕ್ಕಳು
ಶ್ರೀ ಪುರಾಣಿಕ ಮಠದ ವೀರಭದ್ರಯ್ಯ (ಬಾಬು)
ಶ್ರೀ ಶಿವಶಂಕರಯ್ಯ ಪುರಾಣಿಕ್ ಮಠ, ಶ್ರೀಮತಿ ಕವಿತ ಮತ್ತು ಮಕ್ಕಳು
ಶ್ರೀ/ಶ್ರೀಮತಿ ಗಡ್ಡದೇವರು ಮಠದ ನಾಗರತ್ನಮ್ಮ ಬಸವರಾಜ್ ಕುಟುಂಬ ವರ್ಗ
ಶ್ರೀ ಕೆ.ಟಿ. ಶಿವಕುಮಾರ್, ಶ್ರೀಮತಿ ಪುಷ್ಪ ಮತ್ತು ಮಕ್ಕಳು, ಬೆಂಗಳೂರು.
ಶ್ರೀ/ಶ್ರೀಮತಿ ಟಿ.ಎಂ. ಶಾಂತಲಾ ಶಿವಕುಮಾರ್, ಕುಟುಂಬ ವರ್ಗ, ಬೆಂಗಳೂರು.
ಶ್ರೀ/ಶ್ರೀಮತಿ ಕೆ.ಎಂ. ಗೀತಾ, ಎಂ. ಎಂ.ಎಂ. ಕೊಗ್ಗನೂರು ಮಠ, ಕುಟುಂಬದವರು, ಬೆಂಗಳೂರು.
ಕು|| ಸುಧಾ ಪುರಾಣಿಕ್ ಮಠ, ದಾವಣಗೆರೆ. ಹಾಗೂ ಪುರಾಣಿಕ ಮಠದ ವಂಶಸ್ಥರು.

## ಏಳನೇ ವರ್ಷದ ಪುಣ್ಯ ಸ್ಮರಣೆ



ನಿಧನ : 09.01.2017

**ಹುಲ್ಲುಮನೆ ಯಲ್ಲಪ್ಪರ ಶ್ರೀಮತಿ ಹನುಮಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು
ನಿಮ್ಮ ಆದರ್ಶಗಳು ನಮಗೆ ದಾರಿದೀಪ. ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಶ್ರೀ ಹುಲ್ಲುಮನೆ ಯಲ್ಲಪ್ಪರ ಹನುಮಂತಪ್ಪ ಮತ್ತು ಮಕ್ಕಳು
ಶ್ರೀ ಹುಲ್ಲುಮನೆ ಯಲ್ಲಪ್ಪರ ರಾಮಚಂದ್ರಪ್ಪ ಮತ್ತು ಮಕ್ಕಳು
ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು
ಹುಲ್ಲುಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು
ನಿಟುವಳ್ಳಿ, ದಾವಣಗೆರೆ, ಫೋನ್ : 97385 81459, 90089 69070